ಸಂಪುಟ: 11 ಸಂಚಿಕೆ: 229 ಪುಟಗಳು: 4+2 ಬೆಲೆ: ₹ 3.00 ಶನಿವಾರ, ಅಕ್ಟೋಬರ್ 17, 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 229 Pages : 4+2 Rate : 3.00 Saturday, October 17, 2026 Gadag RNI No : KARKAN/2015/63412 E-mail: vijayasakshidaily@gmail.com Post Regn.No: GDG/72/2020-22

## ಸಚಿನ್ ಪಾಟೀಲ್, ಕೃಷ್ಣಗೌಡ ಪಾಟೀಲ್‌ರಿಂದ ಶಿಕ್ಷಣ, ಕ್ರೀಡಾ ಕ್ಷೇತ್ರಕ್ಕೆ ಒತ್ತು

# ಹಿರಿಯರ ಹಾದಿಯಲ್ಲಿ ಯುವ ನಾಯಕರ ಹೆಜ್ಜೆ

**ವಿಜಯಸಾಕ್ಷಿ ಸುದ್ದಿ, ಗದಗ**

ಒಂದು ಕಡೆ ಜನಸೇವೆಯ ಮೂಲಕವೇ ರಾಜ್ಯ ರಾಜಕಾರಣದಲ್ಲಿ ತಮ್ಮದೇ ಛಾಪು ಮೂಡಿಸಿದ ಹಿರಿಯ ನಾಯಕರು. ಮತ್ತೊಂದೆಡೆ ಅದೇ ಪರಂಪರೆಯನ್ನು ಮುಂದುವರಿಸುವ ಉತ್ಸಾಹದಲ್ಲಿರುವ ಯುವ ನಾಯಕರು. ಹಿರಿಯರ ಅನುಭವಕ್ಕೆ ಯುವಕರ ಉತ್ಸಾಹ ಬೆರೆತಿದ್ದು, ಗದಗ ಕ್ಷೇತ್ರದ ಅಭಿವೃದ್ಧಿಯತ್ತ ಹೊಸ ತಲೆಮಾರಿನ ಚಿತ್ತ ನೆಟ್ಟಿದೆ.

ಮಾಜಿ ಸಚಿವ ದಿ. ಕೆ. ಎಚ್. ಪಾಟೀಲರ ಜನಪರ ರಾಜಕಾರಣ, ಅಭಿವೃದ್ಧಿಯ ಕನಸು ಹಾಗೂ ಸೇವಾ ಮನೋಭಾವ ಇಂದಿಗೂ ಜನಮಾನಸದಲ್ಲಿ ನೆನಪಾಗಿ ಉಳಿದಿವೆ.

ಅವರ ತತ್ವಾದರ್ಶಗಳನ್ನು ಮೈಗೂಡಿಸಿ ಕೊಂಡು ಮುನ್ನಡೆಯುತ್ತಿರುವ ಡಿ. ಆರ್. ಪಾಟೀಲ್ ಹಾಗೂ ಎಚ್. ಕೆ. ಪಾಟೀಲ್ ರಾಜಕೀಯ ವಲಯದಲ್ಲಿ ತಮ್ಮದೇ ಆದ ಗುರುತು ಮೂಡಿಸಿದ್ದಾರೆ.ಇದೀಗ ಈ ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ಸಚಿನ್ ಪಾಟೀಲ್ ಹಾಗೂ ಕೃಷ್ಣಗೌಡ ಪಾಟೀಲ್ ಯುವ ನಾಯಕತ್ವದ ಮೂಲಕ ಗಮನ ಸೆಳೆಯುತ್ತಿದ್ದಾರೆ.

### ಹಿರಿಯರ ಹಾದಿಯಲ್ಲಿ ಯುವ ನಾಯಕರ ಹೆಜ್ಜೆ

ಡಿ. ಆರ್. ಪಾಟೀಲ್ ಅವರ ಪುತ್ರ ಸಚಿನ್ ಪಾಟೀಲ್ ಶಿಕ್ಷಣ ಕ್ಷೇತ್ರದಲ್ಲಿ





ಆಸಕ್ತಿ ವಹಿಸಿ, ಬಡ ವಿದ್ಯಾರ್ಥಿಗಳಿಗೆ ನೆರವಾಗುವ ಮೂಲಕ ಅವರ ವಿದ್ಯಾಭ್ಯಾಸಕ್ಕೆ ಆಸರೆಯಾಗುತ್ತಿದ್ದಾರೆ. ಆರ್ಥಿಕ ಸಂಕಷ್ಟದ ನಡುವೆಯೂ ಶಿಕ್ಷಣ ಮುಂದುವರಿಸಲು ಪರದಾಡುವ ವಿದ್ಯಾರ್ಥಿಗಳಿಗೆ ನೆರವಾಗುವ ಪ್ರಯತ್ನ ಅವರ ಕಾರ್ಯಚಟುವಟಿಕೆಗಳಲ್ಲಿ ಪ್ರಮುಖವಾಗಿದೆ.

ಇತ್ತ ಎಚ್. ಕೆ. ಪಾಟೀಲ್ ಅವರ ಪುತ್ರ ಕೃಷ್ಣಗೌಡ ಪಾಟೀಲ್ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದಾರೆ. ಗದಗ ಜಿಲ್ಲೆ ಕ್ರೀಡಾ ಕ್ಷೇತ್ರದಲ್ಲಿ ತನ್ನದೇ ಆದ ಪರಂಪರೆ ಹೊಂದಿದೆ.

ಈ ಪರಂಪರೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಜಿಲ್ಲೆಯ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

### ಸೇವೆಯೇ ರಾಜಕೀಯಕ್ಕೆ ಬುನಾದಿ

ರಾಜಕೀಯ ಕುಟುಂಬದ ಹಿನ್ನೆಲೆ ಈ ಯುವ ನಾಯಕರಿಗೆ ಪರಿಚಯ ಮತ್ತು ಮಾರ್ಗದರ್ಶನದ ಬಲ ನೀಡಿದೆ. ಆದರೆ ಜನರ ಮನಸ್ಸಿನಲ್ಲಿ ನೆಲೆ ನಿಲ್ಲಲು ಜನರೊಂದಿಗೆ ಬೆರೆಯುವುದು, ಅವರ ಸಮಸ್ಯೆಗಳನ್ನು ಆಲಿಸುವುದು ಹಾಗೂ ಸಂಕಷ್ಟದ ಸಮಯದಲ್ಲಿ ನೆರವಿಗೆ ಧಾವಿಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಇಬ್ಬರೂ ಯುವ ನಾಯಕರು ಕ್ಷೇತ್ರದ ಜನರೊಂದಿಗೆ ಸಂಪರ್ಕ ಬೆಳೆಸುತ್ತಿದ್ದು, ಯುವಕರ ಬೆಂಬಲವನ್ನೂ ಗಳಿಸುತ್ತಿದ್ದಾರೆ.

ಹೋದಲ್ಲೆಲ್ಲ ಯುವಕರ ಒಡನಾಟ, ಅಭಿಮಾನಿಗಳ ಉತ್ಸಾಹ ಇವರಿಗೆ ರಾಜಕೀಯ ಭವಿಷ್ಯದ ಕುರಿತು ಹೊಸ ನಿರೀಕ್ಷೆ ಮೂಡಿಸಿದೆ. ಹಿರಿಯರಾದ ಡಿ. ಆರ್. ಪಾಟೀಲ್ ಹಾಗೂ ಎಚ್. ಕೆ. ಪಾಟೀಲ್ ಅವರ ದೀರ್ಘ ರಾಜಕೀಯ ಅನುಭವ ಈ ಯುವಕರಿಗೆ ಮಾರ್ಗದರ್ಶಕ ಶಕ್ತಿಯಾಗಿದೆ.

ಹಿರಿಯರ ರಾಜಕೀಯ ನಡೆ, ಜನರೊಂದಿಗೆ ಸಂವಹನ ನಡೆಸುವ ಕಲೆ ಹಾಗೂ ಕ್ಷೇತ್ರದ ಸಮಸ್ಯೆಗಳನ್ನು ಅರಿಯುವ ವಿಧಾನಗಳನ್ನು ಯುವ ನಾಯಕರು ಹತ್ತಿರದಿಂದ ಕಲಿಯುತ್ತಿದ್ದಾರೆ.

### ಗದಗದ ಅಭಿವೃದ್ಧಿಗೆ ಹೊಸ ನಿರೀಕ್ಷೆ

ಸಚಿನ್ ಪಾಟೀಲ್ ಶಿಕ್ಷಣ ಕ್ಷೇತ್ರದಲ್ಲಿ, ಕೃಷ್ಣಗೌಡ ಪಾಟೀಲ್ ಕ್ರೀಡಾ ಕ್ಷೇತ್ರದಲ್ಲಿ ತಮ್ಮದೇ ಆದ ಕಾರ್ಯವೈಖರಿಯೊಂದಿಗೆ ಮುನ್ನಡೆಯುತ್ತಿರುವುದು ಗಮನಾರ್ಹ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಬದುಕಿನಲ್ಲಿ ಇನ್ನಷ್ಟು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶಗಳು ಒದಗಿಬರಬಹುದು ಎಂಬ ನಿರೀಕ್ಷೆ ಅವರ ಅಭಿಮಾನಿಗಳಲ್ಲಿದೆ.

ಹಿರಿಯರ ಅನುಭವ, ಯುವಕರ ಉತ್ಸಾಹ ಮತ್ತು ಜನಸೇವೆಯ ಸಂಕಲ್ಪ ಒಂದಾದರೆ ಗದಗ ಜಿಲ್ಲೆಯ ಅಭಿವೃದ್ಧಿಗೆ ಹೊಸ ಆಯಾಮ ಸಿಗಬಹುದು. ರಾಜಕೀಯದಲ್ಲಿ ಮುಂದಿನ ಅವಕಾಶಗಳು ಏನೇ ಇರಲಿ, ಜನರ ವಿಶ್ವಾಸ ಗಳಿಸುವುದೇ ಯುವ ನಾಯಕರ ಮುಂದಿರುವ ನಿಜವಾದ ಸವಾಲು. ಆ ವಿಶ್ವಾಸವನ್ನು ಸೇವೆಯ ಮೂಲಕ ಗಟ್ಟಿಗೊಳಿಸಿಕೊಂಡು ಮುನ್ನಡೆಯಲಿ ಎಂಬುದು ಅಭಿಮಾನಿಗಳ ಆಶಯವಾಗಿದೆ.

---

# ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದ ವಿವಿಧ ಬಡಾವಣೆಗಳಲ್ಲಿ ಅಕ್ಟೋಬರ್ 17ರಂದು ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ತಿಳಿಸಿದೆ.

### ನೀರು ಪೂರೈಕೆಯಾಗುವ ಪ್ರದೇಶಗಳು

ವಾರ್ಡ್ ನಂ. 30, 34 ಮತ್ತು 35ರ ವಡ್ಡರಗೇರಿ, ನೀಲಮ್ಮತಾಯಿ ಮಠದ 1ನೇ ಹಾಗೂ 3ನೇ ಕ್ರಾಸ್, ಇ.ಡಬ್ಲ್ಯೂ. ಎಸ್.

ವಾರ್ಡ್ ನಂ. 31 ಮತ್ತು 32ರ ದಾಸರ ಓಣಿ 24/7, ಸಿಕ್ಕಲಗಾರ ಓಣಿ ಹಾಗೂ ಭಜಂತ್ರಿ ಓಣಿ. ವಾರ್ಡ್ ನಂ. 07ರ ಶಿವಾಜಿನಗರ ಭಾಗ-3 ಹಾಗೂ ರಂಗಪ್ಪಜ್ಜನ ಮಠ ಭಾಗ-2. ವಾರ್ಡ್ ನಂ. 22ರ ಗಂಗಿಮಡಿ ಮತ್ತು ಲಿಡ್ಕರ್ ಬಡಾವಣೆ. ವಾರ್ಡ್ ನಂ. 01 ಮತ್ತು 02ರ ಎಸ್.ಎಂ. ಕೃಷ್ಣಾ ನಗರ ಸ್ಲ್ಯಾಬ್ ಮನೆಗಳು, ವೆಲ್‌ಫೇರ್ ಟೌನ್‌ಶಿಪ್‌ನ 1ರಿಂದ 6ನೇ ಕ್ರಾಸ್‌ವರೆಗೆ, ಕುಷ್ಟಗಿ ಚಾಳ್, ಮಾನ್ವಿ ಚಾಳ್, ಗೌಳಿಯವರ ಓಣಿ ಹಾಗೂ ರಾಮದೇವರ ಗುಡಿ ಲೈನ್.

ವಾರ್ಡ್ ನಂ. 05 ಮತ್ತು 07ರ ರಂಗಪ್ಪಜ್ಜನ ಮಠ ಭಾಗ-1, ಇಂಡಸ್ಟ್ರಿಯಲ್ ಏರಿಯಾ ಹಾಗೂ ಕೆ.ಎಚ್.ಡಿ.ಸಿ. ನೇಕಾರ ಕಾಲೋನಿ.

ವಾರ್ಡ್ ನಂ. 27ರ ಕಾಶಿ ವಿಶ್ವನಾಥ ನಗರ. ತಾಂತ್ರಿಕ ಕಾರಣಗಳಿಂದ ನೀರು ಪೂರೈಕೆಯಲ್ಲಿ ಅಡಚಣೆ ಉಂಟಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಗದಗ-ಬೆಟಗೇರಿ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಜೇಂದ್ರಗಡ ರಸ್ತೆ ಯೋಜನೆಗೆ ಆಕ್ಷೇಪಣೆ ಸಲ್ಲಿಸಲು 60 ದಿನಗಳ ಗಡುವು

**ವಿಜಯಸಾಕ್ಷಿ ಸುದ್ದಿ, ಗದಗ**

ಗಜೇಂದ್ರಗಡ ಪಟ್ಟಣದ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸಿದ್ಧಪಡಿಸಿರುವ ಜಿಐಎಸ್ ಆಧಾರಿತ ರೋಡ್ ನೆಟ್‌ವರ್ಕ್ ಗ್ರಿಡ್ ಪ್ಲಾನ್ ನಕ್ಷೆಯನ್ನು ಸಾರ್ವಜನಿಕರ ವೀಕ್ಷಣೆಗಾಗಿ ಪುರಸಭೆ ಕಾರ್ಯಾಲಯದಲ್ಲಿ ಇರಿಸಲಾಗಿದೆ.

ಯೋಜನೆಯಿಂದ ಬಾಧಿತರಾಗಬಹುದಾದ ಸಾರ್ವಜನಿಕರು ಪ್ರಕಟಣೆ ಪ್ರಕಟವಾದ ದಿನದಿಂದ 60 ದಿನಗಳೊಳಗೆ ತಮ್ಮ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ಸಂಬಂಧಪಟ್ಟ ಕಚೇರಿಗೆ ಖುದ್ದಾಗಿ, ನೋಂದಾಯಿತ ಅಂಚೆ ಅಥವಾ ಇ-ಮೇಲ್ ಮೂಲಕ ಸಲ್ಲಿಸಬಹುದು ಎಂದು ಗಜೇಂದ್ರಗಡ ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

# ಇಂದು ವಾಸಣ್ಣ ಕುರಡಗಿ ಪದಗ್ರಹಣ

**ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷ ವಾಸಣ್ಣ ಕುರಡಗಿ ಅವರ ಪದಗ್ರಹಣ ಸಮಾರಂಭ ಅ.17ರಂದು ಮಧ್ಯಾಹ್ನ 2 ಗಂಟೆಗೆ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಲಿದೆ. ಕೆಪಿಸಿಸಿ ರಾಜ್ಯಾಧ್ಯಕ್ಷ ಬಿ.ಕೆ. ಹರಿಪ್ರಸಾದ ಕಾರ್ಯಕ್ರಮ ಉದ್ಘಾಟಿಸುವರು. ಉನ್ನತ ಶಿಕ್ಷಣ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ, ಮಾಜಿ ಸಚಿವ ಎಚ್.ಕೆ. ಪಾಟೀಲ, ಡಿ.ಆರ್. ಪಾಟೀಲ ಸೇರಿದಂತೆ ಶಾಸಕರು, ಮಾಜಿ ಶಾಸಕರು ಹಾಗೂ ಪಕ್ಷದ ಪ್ರಮುಖ ಮುಖಂಡರು ಪಾಲ್ಗೊಳ್ಳುವರು.

ಜಿಲ್ಲಾ ಕಾಂಗ್ರೆಸ್, ಬ್ಲಾಕ್ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್ ಸೇರಿದಂತೆ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಅ.23ರಂದು ಚೆನ್ನಮ್ಮ ಜಯಂತಿ ಆಚರಣೆ

**ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಜಾರಿಯಲ್ಲಿರುವ ನೀತಿ ಸಂಹಿತೆಯಿಂದಾಗಿ ಅಕ್ಟೋಬರ್ 23ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಜಿಲ್ಲಾಡಳಿತದಿಂದ ಪುಷ್ಪಾರ್ಚನೆ ಮೂಲಕ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಯಂತಿಯ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ಬಾರಿಯೂ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಉದ್ದೇಶಿಸಲಾಗಿತ್ತು. ಆದರೆ, ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಿಲ್ಲಾಡಳಿತದಿಂದ ಸರಳವಾಗಿ ಆಚರಿಸಲಾಗುವುದು. ಚುನಾವಣೆ ಬಳಿಕ ಸಮಾಜದ ವತಿಯಿಂದ ಅದ್ದೂರಿಯಾಗಿ ಜಯಂತಿ ಆಚರಿಸಬಹುದು. ಈ ನಿಟ್ಟಿನಲ್ಲಿ ಸಮಾಜದ ಮುಖಂಡರು ಹಾಗೂ ಹಿರಿಯರು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಬಸವರಾಜ ವ್ಹಿ. ಬಳ್ಳಾರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಗಣ್ಯರು ಹಾಗೂ ಹಿರಿಯರು ಉಪಸ್ಥಿತರಿದ್ದರು.

---

## ನಾಲ್ಕೂ ಪದವೀಧರ ಕ್ಷೇತ್ರಗಳಲ್ಲಿ ಎನ್‌ಡಿಎ ಗೆಲುವು ಖಚಿತ: ಪ್ರಹ್ಲಾದ ಜೋಶಿ ವಿಶ್ವಾಸ

# ಬೆಲೆ ಏರಿಕೆ, ಆಡಳಿತ ವೈಫಲ್ಯವೇ ಕಾಂಗ್ರೆಸ್‌ಗೆ ಮುಳುವು!



### ರೈತರಿಗೆ ಪರಿಹಾರದಲ್ಲಿ ತಾರತಮ್ಯ

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಣಭೂಮಿ ಕೃಷಿಕರಿಗೆ ₹13 ಸಾವಿರ ಹಾಗೂ ನೀರಾವರಿ ಪ್ರದೇಶದ ರೈತರಿಗೆ ₹25 ಸಾವಿರ ಬರ ಪರಿಹಾರ ನೀಡಲಾಗಿತ್ತು. ಆದರೆ ಈಗಿನ ಕಾಂಗ್ರೆಸ್ ಸರ್ಕಾರ ರೈತರಿಗೆ ಕೇವಲ ₹2,500 ನೀಡಿದೆ. ಬರದ ಸಂಕಷ್ಟದಲ್ಲಿರುವ ರೈತರಿಗೆ ಸಮರ್ಪಕ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಪ್ರಹ್ಲಾದ ಜೋಶಿ ಆರೋಪಿಸಿದರು.

**ವಿಜಯಸಾಕ್ಷಿ ಸುದ್ದಿ, ಗದಗ**

ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ, ಬೆಲೆ ಏರಿಕೆ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸದ ಧೋರಣೆಯಿಂದ ಜನರು ರೋಸಿಹೋಗಿದ್ದಾರೆ. ಇದರ ಪರಿಣಾಮ ಪಶ್ಚಿಮ ಪದವೀಧರರ ಕ್ಷೇತ್ರ ಸೇರಿದಂತೆ ರಾಜ್ಯದ ನಾಲ್ಕೂ ವಿಧಾನಪರಿಷತ್ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.

ಶುಕ್ರವಾರ ಪಶ್ಚಿಮ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ ಪರ ಪ್ರಚಾರ ಸಭೆಗೆ ಆಗಮಿಸಿದ್ದ ಅವರು, ಸುದ್ದಿಗಾರರೊಂದಿಗೆ ಮಾತನಾಡಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನ ಆಂತರಿಕ ಅಸಮಾಧಾನ ಹಾಗೂ ಸರ್ಕಾರದ ಆಡಳಿತ ವೈಫಲ್ಯ ಬಿಜೆಪಿಗೆ ಅನುಕೂಲವಾಗಲಿದೆ. ಸರ್ಕಾರದ ವೈಫಲ್ಯಗಳನ್ನು ಮರೆಮಾಚಲು ಸ್ಟಿಂಗ್ ಆಪರೇಷನ್ ವಿಚಾರವನ್ನು ಮುನ್ನೆಲೆಗೆ ತರಲಾಗುತ್ತಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಬರದ ಪರಿಸ್ಥಿತಿ ತೀವ್ರವಾಗಿದ್ದರೂ ಸಮರ್ಪಕವಾಗಿ ನೀರು ಮತ್ತು ವಿದ್ಯುತ್ ಪೂರೈಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಲೋಡ್‌ಶೆಡ್ಡಿಂಗ್ ಆರಂಭವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ಗಂಭೀರವಾಗಿದೆ. ಅಗತ್ಯ ಪ್ರಮಾಣದಲ್ಲಿ ವಿದ್ಯುತ್ ಖರೀದಿಸಿ ಪೂರೈಸಲೂ ಸರ್ಕಾರ ಅಸಮರ್ಥವಾಗಿದೆ ಎಂದು ಟೀಕಿಸಿದರು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಣಭೂಮಿ ಕೃಷಿಕರಿಗೆ ₹13 ಸಾವಿರ ಹಾಗೂ ನೀರಾವರಿ ಪ್ರದೇಶದ ರೈತರಿಗೆ ₹25 ಸಾವಿರ ಬರ ಪರಿಹಾರ ನೀಡಲಾಗಿತ್ತು. ಆದರೆ ಈಗಿನ ಸರ್ಕಾರ ರೈತರಿಗೆ ಕೇವಲ ₹2,500 ನೀಡಿದೆ ಎಂದು ಆರೋಪಿಸಿದರು. ಸಾರಿಗೆ ಪ್ರಯಾಣ ದರ, ಹಾಲು ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಲಾಗಿದೆ. ಜನನ-ಮರಣ ಪ್ರಮಾಣಪತ್ರ ಹಾಗೂ ವಿಮೆ ಸೇರಿದಂತೆ ವಿವಿಧ ಸೇವೆಗಳ ವೆಚ್ಚವೂ ಹೆಚ್ಚಾಗಿದೆ. ಮಹಿಳೆಯರಿಗೆ ₹2 ಸಾವಿರ ನೀಡುವ ಸರ್ಕಾರ, ಮತ್ತೊಂದೆಡೆ ಬೆಲೆ ಏರಿಕೆಯ ಮೂಲಕ ಜನರಿಂದ ₹5 ಸಾವಿರ ವಸೂಲಿ ಮಾಡುತ್ತಿದೆ ಎಂದು ಟೀಕಿಸಿದರು.

> ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧದ ಆರೋಪಗಳ ಸತ್ಯಾಸತ್ಯತೆ ಹೊರಬರಬೇಕು. ಈ ಪ್ರಕರಣದಲ್ಲಿ ಎಸ್‌ಐಟಿ ರಚಿಸಿ ತನಿಖೆ ನಡೆಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ, ರಾಜ್ಯದ ಹಿರಿಯ ನಾಯಕರೊಬ್ಬರ ವಿರುದ್ಧದ ಆರೋಪದ ತನಿಖೆಗೆ ಆದೇಶಿಸಿ ಈ ಚರ್ಚೆಗೆ ಅಂತ್ಯ ಹಾಡಬೇಕು.
>
> – ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಮತ್ತೊಂದು ಶಸ್ತ್ರಚಿಕಿತ್ಸೆಯಾಗಲಿ ಎಂಬರ್ಥದಲ್ಲಿ ಗೃಹ ಸಚಿವರು ಹೇಳಿಕೆ ನೀಡಿರುವುದು ಸರಿಯಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಇಂತಹ ಹೇಳಿಕೆ ನೀಡಬಾರದು. ಇದು ನಮ್ಮ ಸಂಸ್ಕೃತಿಯಲ್ಲ ಎಂದು ಪ್ರಹ್ಲಾದ ಜೋಶಿ ಆಕ್ಷೇಪ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ಸೋಲಿಗೆ ಬಿಜೆಪಿ ಮಾತ್ರ ಕಾರಣವಲ್ಲ. ಈ ಹಿಂದೆ ಮಹಾರಾಷ್ಟ್ರದಲ್ಲಿ ಶರದ್ ಪವಾರ್ ನೇತೃತ್ವದ ಪಕ್ಷ, ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಹಾಗೂ ಬಿಹಾರದಲ್ಲಿ ಆರ್‌ಜೆಡಿ ಕಾಂಗ್ರೆಸ್‌ನ್ನು ಸೋಲಿಸಿದ್ದವು. ಈಗ ಅದೇ ಪಕ್ಷಗಳೊಂದಿಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳುತ್ತಿದೆ ಎಂದು ಟೀಕಿಸಿದರು. ಸಾರಿಗೆ ಸಂಸ್ಥೆಯ ಬಸ್‌ಗಳು ಡೀಸೆಲ್ ಇಲ್ಲದೆ ರಸ್ತೆಯಲ್ಲಿ ನಿಲ್ಲುತ್ತಿವೆ. ಸ್ಪೇಪ್ನಿ ಇಲ್ಲದೆ ಬಸ್‌ಗಳು ಕೆಟ್ಟು ನಿಲ್ಲುವ ಪರಿಸ್ಥಿತಿಯೂ ಇದೆ. ಆದರೆ ಸರ್ಕಾರದ ಮಟ್ಟದಲ್ಲಿ ಸ್ಟೇಪ್ನಿಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಬೆಂಗಳೂರಿನಲ್ಲಿ ಎರಡೆರಡು ಮದುವೆಯಾದ ರಾಜಕಾರಣಿಗಳ ಬಗ್ಗೆಯೂ ಚರ್ಚೆ ನಡೆಯುತ್ತಿದೆ ಎಂದು ವ್ಯಂಗ್ಯವಾಡಿದರು.

---

# ಕಬ್ಬು ಬೆಳೆಗಾರರು ಹೋರಾಟ ಕೈಬಿಡಲು ಜೋಶಿ ಮನವಿ

**ವಿಜಯಸಾಕ್ಷಿ ಸುದ್ದಿ, ಗದಗ**

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರೋಪಾಯಗಳನ್ನು ಶಿಫಾರಸು ಮಾಡಲು ಕೇಂದ್ರ ಸರ್ಕಾರ ಸಮಿತಿ ರಚಿಸಿದ್ದು, ಸೋಮವಾರ ಮೊದಲ ಸಭೆ ನಡೆಯಲಿದೆ. ರೈತರು ಹೋರಾಟ ಕೈಬಿಟ್ಟು ಸಮಿತಿಯೊಂದಿಗೆ ಚರ್ಚೆ ನಡೆಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಮುಖಂಡರೊಂದಿಗೆ ಈಗಾಗಲೇ ಚರ್ಚೆ ನಡೆಸಲಾಗಿದ್ದು, ಮೂರ್ನಾಲ್ಕು ಸಂಘಟನೆಗಳು ತಮ್ಮ ಸಮಸ್ಯೆಗಳನ್ನು ತಿಳಿಸಿವೆ. ಅವುಗಳನ್ನು ಪರಿಶೀಲಿಸಿ ಪರಿಹಾರ ಕಂಡುಕೊಳ್ಳಲು ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದರು.



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಎಥೆನಾಲ್ ಉತ್ಪಾದನೆ ಮತ್ತು ಖರೀದಿ ವ್ಯವಸ್ಥೆಯಿಂದ ಸಕ್ಕರೆ ಕಾರ್ಖಾನೆಗಳಿಗೆ ಆದಾಯದ ಹೊಸ ಮೂಲ ಸೃಷ್ಟಿಯಾಗಿದೆ. ಇದರಿಂದ ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಹಣ ಪಾವತಿಯಾಗಲು ನೆರವಾಗಿದೆ ಎಂದು ಹೇಳಿದರು.

ಕಬ್ಬಿನ ತೂಕದಲ್ಲಿನ ವ್ಯತ್ಯಾಸ, ಸಕ್ಕರೆ ಇಳುವರಿ ಪರಿಶೀಲನೆ ಹಾಗೂ ರಾಜ್ಯ ಸಲಹಾ ಬೆಲೆ (ಎಸ್‌ಎಪಿ) ನಿಗದಿ ವಿಚಾರದಲ್ಲಿ ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ವಿದ್ಯುತ್ ದರ ಹೆಚ್ಚಳವೂ ಸಕ್ಕರೆ ಕಾರ್ಖಾನೆಗಳ ವೆಚ್ಚದ ಒತ್ತಡವನ್ನು ಹೆಚ್ಚಿಸಿದೆ ಎಂದು ಆರೋಪಿಸಿದರು.

---

## ಶ್ರೀ ಲಕ್ಷ್ಮಿ ಎಂಟರ್‌ಪ್ರೈಸಸ್ ಕಚೇರಿಗೆ ಬೀಗ, ತಿಂಗಳಿಂದ ಸಂಪರ್ಕಕ್ಕೆ ಸಿಗದ ವ್ಯಕ್ತಿ

# ಸರ್ಕಾರಿ ಸಾಲದ ಆಮಿಷ ಲಕ್ಷಾಂತರ ರೂ. ವಂಚನೆ ಆರೋಪ!







**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸ್ವಯಂ ಉದ್ಯೋಗ ಆರಂಭಿಸಲು ಸರ್ಕಾರಿ ಯೋಜನೆಯಡಿ ಸಾಲ ಕೊಡಿಸುವುದಾಗಿ ನಂಬಿಸಿ ಸಾರ್ವಜನಿಕರಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ ವಂಚಿಸಿರುವ ಆರೋಪ ಲಕ್ಷ್ಮೇಶ್ವರ ಪಟ್ಟಣದಲ್ಲಿ ನಡೆದಿದ್ದ ತಡವಾಗಿ ಬೆಳಕಿಗೆ ಬಂದಿದೆ. ಹಣ ಪಡೆದ ಸಂಸ್ಥೆಯ ಕಚೇರಿಗೆ ಬೀಗ ಹಾಕಲಾಗಿದ್ದು, ಸಾಲದ ನಿರೀಕ್ಷೆಯಲ್ಲಿದ್ದ ಜನರು ಈಗ ಹಣವೂ ಮರಳದೆ ಕಂಗಾಲಾಗಿದ್ದಾರೆ.

ಪಟ್ಟಣದ ಪಂಪ ವೃತ್ತದ ಬಳಿ ಶ್ರೀ ಲಕ್ಷ್ಮಿ ಎಂಟರ್‌ಪ್ರೈಸಸ್ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿದ್ದ ಸಂಸ್ಥೆಯು, ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮದ (ಪಿಎಂಇಜಿಪಿ) ಅಡಿಯಲ್ಲಿ ಸಾಲ ಕೊಡಿಸುವುದಾಗಿ ಭರವಸೆ ನೀಡಿತ್ತು ಎನ್ನಲಾಗಿದೆ.

ಸ್ವಂತ ಉದ್ಯಮ ಆರಂಭಿಸಿ ಬದುಕು ಕಟ್ಟಿಕೊಳ್ಳುವ ಉದ್ದೇಶದಿಂದ ಗ್ರಾಮೀಣ ಭಾಗದ ಜನರು ಸಂಸ್ಥೆಯನ್ನು ನಂಬಿ ಹಣ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಸಾಲ ಮಂಜೂರು ಮಾಡಿಸಿಕೊಡುವುದಾಗಿ ನಂಬಿಸಿ ಅರ್ಜಿದಾರರಿಂದ ತಲಾ ₹20 ಸಾವಿರದಿಂದ ₹30 ಸಾವಿರದವರೆಗೆ ಹಣ ಸಂಗ್ರಹಿಸಲಾಗಿದೆ ಎಂಬ ಆರೋಪವಿದೆ.

ಹಣ ಮರಳಿಸುವ ಭರವಸೆಯೊಂದಿಗೆ ಕೆಲವರಿಗೆ ಎರಡು-ಮೂರು ಚೆಕ್‌ಗಳನ್ನು ನೀಡಲಾಗಿತ್ತು ಎನ್ನಲಾಗಿದೆ. ಇದನ್ನು ನಂಬಿದ ಅನೇಕರು ಹಣ ನೀಡಿದ್ದಾರೆ.

ಆದರೆ, ಕಳೆದ ಒಂದು ತಿಂಗಳಿಂದ ಹಣ ಪಡೆದ ವ್ಯಕ್ತಿ ಸಂಪರ್ಕಕ್ಕೆ ಸಿಗುತ್ತಿಲ್ಲ.

ಪಂಪ ವೃತ್ತದ ಬಳಿಯ ಕಚೇರಿಗೂ ಬೀಗ ಹಾಕಲಾಗಿದೆ. ಬ್ಯಾಂಕ್ ಖಾತೆಯ ವಹಿವಾಟು ಸ್ಥಗಿತಗೊಂಡಿರುವ ಬಗ್ಗೆಯೂ ಮಾಹಿತಿ ಲಭ್ಯವಾಗಿದೆ.

### ಸಾಲವೂ ಇಲ್ಲ, ಹಣವೂ ಇಲ್ಲ!

ಸರ್ಕಾರಿ ಸಾಲದ ನಿರೀಕ್ಷೆಯಲ್ಲಿದ್ದ ಜನರಿಗೆ ಈಗ ಸಾಲವೂ ದೊರೆಯದೆ, ನೀಡಿದ ಹಣವೂ ವಾಪಸ್ ಸಿಗದೆ ಆತಂಕ ಎದುರಾಗಿದೆ.

ಸ್ವಯಂ ಉದ್ಯೋಗದ ಮೂಲಕ ಬದುಕು ಕಟ್ಟಿಕೊಳ್ಳುವ ಕನಸು ಕಂಡಿದ್ದವರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮವು ಹೊಸ ಸ್ವಯಂ ಉದ್ಯೋಗ ಹಾಗೂ ಸಣ್ಣ ಉದ್ಯಮಗಳನ್ನು ಆರಂಭಿಸಲು ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಸಾಲ ಮತ್ತು ಸಬ್ಸಿಡಿ ಯೋಜನೆಯಾಗಿದೆ.

ಈ ಯೋಜನೆಗೆ ಅಧಿಕೃತ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಉಚಿತವಾಗಿದೆ. ಹೀಗಾಗಿ ಸರ್ಕಾರಿ ಯೋಜನೆಯಡಿ ಸಾಲ ಕೊಡಿಸುವುದಾಗಿ ಹೇಳಿ ಹಣ ಕೇಳುವವರ ಬಗ್ಗೆ ಸಾರ್ವಜನಿಕರು ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಹಣ ಕಳೆದುಕೊಂಡಿರುವ ಚಂದ್ರು ನಾಯಕ್, ಸುನೀತಾ ಗಣೇಶ ಲಮಾಣಿ ಹಾಗೂ ವೆಂಕಟೇಶ ಕಾರಬಾರಿ ಅವರು ಪತ್ರಕರ್ತರ ಮುಂದೆ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಪ್ರಕರಣದ ಕುರಿತು ಪೊಲೀಸ್ ಠಾಣೆಯ ಮೊರೆ ಹೋಗಿರುವ ಸಂತ್ರಸ್ತರು, ಹಣ ಪಡೆದ ವ್ಯಕ್ತಿಯನ್ನು ಪತ್ತೆಹಚ್ಚಿ, ವಹಿವಾಟಿನ ಪರಿಶೀಲನೆ ನಡೆಸಿ ತಮ್ಮ ಹಣ ಮರಳಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸರ್ಕಾರಿ ಯೋಜನೆಗಳ ಹೆಸರಿನಲ್ಲಿ ವಂಚನೆಗೆ ಒಳಗಾಗದಂತೆ ಸಾರ್ವಜನಿಕರು ಸಂಸ್ಥೆಗಳ ಅಧಿಕೃತತೆಯನ್ನು ಪರಿಶೀಲಿಸಬೇಕು. ಅನುಮಾನಾಸ್ಪದ ಹಣದ ಬೇಡಿಕೆ ಕಂಡುಬಂದಲ್ಲಿ ಪೊಲೀಸರಿಗೆ ಮಾಹಿತಿ ನೀಡಬೇಕು.

ಸಣ್ಣ ಸುದ್ದಿಗಳು

## 24 ಸಹಕಾರ ಸಂಘಗಳ ನೋಂದಣಿ ರದ್ದತಿಗೆ ಕ್ರಮ

ವಿಜಯಸಾಕ್ಷಿ ಸುದ್ದಿ, ಗದಗ

ಹಲವು ವರ್ಷಗಳಿಂದ ಕಾರ್ಯನಿರ್ವಹಿಸದೆ ಸ್ಥಗಿತಗೊಂಡಿರುವ ಗದಗ ಜಿಲ್ಲೆಯ ಸಹಕಾರ ಸಂಘಗಳ ನೋಂದಣಿ ರದ್ದುಗೊಳಿಸಲು ಸಹಕಾರ ಇಲಾಖೆ ಕ್ರಮ ಕೈಗೊಂಡಿದೆ. ಈ ಸಂಘಗಳು 5ರಿಂದ 10 ವರ್ಷಗಳಿಂದ ಲೆಕ್ಕಪರಿಶೋಧನೆ ಮಾಡಿಸದಿರುವುದು, ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸದಿರುವುದು ಹಾಗೂ ವಾರ್ಷಿಕ ಮಹಾಸಭೆ ಜರುಗಿಸದಿರುವುದು ಪ್ರಮುಖ ಕಾರಣಗಳಾಗಿವೆ.

ನೋಂದಣಿ ರದ್ದತಿಗೆ ಕ್ರಮ ಕೈಗೊಳ್ಳಲಾಗಿರುವ ಸಂಘಗಳಲ್ಲಿ ಮಲ್ಲಾಪೂರ, ಕಲ್ಲಿಗನೂರ, ಮುಶಿಗೇರಿ, ಭೋಪಳಾಪೂರ, ಹಿರೇಅಳಗುಂಡಿ, ಬಾಗೇವಾಡಿ, ಮಲ್ಲಿಕಾರ್ಜುನಪುರ, ಜಾಲವಾಡಗಿ, ಹೆಸರೂರ, ಜಂತ್ಲಿ–ಶಿರೂರ, ಮುರಡಿ, ಮುಂಡರಗಿ ಹಾಗೂ ಹೊಸಡಂಬಳದ ಹಾಲು ಉತ್ಪಾದಕರ ಸಹಕಾರ ಸಂಘಗಳು ಸೇರಿವೆ.

ಇದರ ಜತೆಗೆ ಸೂಡಿಯ ಸರಸ್ವತಿ ಮಹಿಳಾ ಕಂಜುಮರ್ಸ್ ಕೋ–ಆಪ್ ಸೊಸೈಟಿ, ಗದಗದ ಪ್ರಾಥಮಿಕ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ, ಗದಗ–ಬೆಟಗೇರಿ ಪ್ರಾಥಮಿಕ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ, ಹೊಳೆಆಲೂರಿನ ರಾಣಿ ಚೆನ್ನಮ್ಮ ಮಹಿಳಾ ಪತ್ತಿನ ಸಹಕಾರ ಸಂಘ, ಗಜೇಂದ್ರಗಡದ ವೆಂಕಟೇಶ್ವರ ಕಂಜುಮರ್ಸ್ ಕೋ–ಆಪ್ ಸೊಸೈಟಿ, ತೇಜಸ್ವಿನಿ ಮಹಿಳಾ ಸಹಕಾರ ಸಂಘ, ಸವಡಿ ನಂ. 2 ಮತ್ತು ಡಿ. ಸ. ಹಡಗಲಿ ನಂ. 2ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಪಟ್ಟಿಯಲ್ಲಿವೆ. ಮುಂಡರಗಿಯ ಭುವನೇಶ್ವರಿ ವಿವಿಧೋದ್ದೇಶಗಳ ಮಹಿಳಾ ಸಹಕಾರ ಸಂಘ, ಗದಗದ ಶ್ರೀ ಕೃಷ್ಣ ಕೈಮಗ್ಗ ಪೀಠೋಪಕರಣ ತಯಾರಕರ ಕೈಗಾರಿಕ ಸಹಕಾರ ಸಂಘ ಹಾಗೂ ಲಕ್ಕುಂಡಿಯ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ನೋಂದಣಿ ರದ್ದತಿಗೂ ಕ್ರಮ ವಹಿಸಲಾಗಿದೆ. ಈ ಸಂಘಗಳಲ್ಲಿ ಸದಸ್ಯರಿಗೆ ಬರಬೇಕಾದ ಹಣ, ಪಿಗ್ಮಿ ಅಥವಾ ಠೇವಣಿ ಮೊತ್ತ ಬಾಕಿ ಇದ್ದಲ್ಲಿ ಸಂಬಂಧಪಟ್ಟ ಸದಸ್ಯರು ಹಾಗೂ ಸಾರ್ವಜನಿಕರು ಪ್ರಕಟಣೆ ಹೊರಡಿಸಿದ ಏಳು ದಿನಗಳೊಳಗೆ ಮೂಲ ದಾಖಲೆಗಳೊಂದಿಗೆ ಗದಗ ಜಿಲ್ಲಾಡಳಿತ ಭವನದ ಕೊಠಡಿ ಸಂಖ್ಯೆ 125ರಲ್ಲಿರುವ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಗೆ ಭೇಟಿ ನೀಡಿ ಆಕ್ಷೇಪಣೆ ಸಲ್ಲಿಸಬಹುದು.

## ದರ್ವೇಶಿ ಪದ್ಯ'ಕ್ಕೆ ಪುಸ್ತಕ ಸೊಗಸು ಬಹುಮಾನ




ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ನೀಡುವ 2025ನೇ ಸಾಲಿನ ಪುಸ್ತಕ ಸೊಗಸು ವಾರ್ಷಿಕ ಬಹುಮಾನಕ್ಕೆ ಬಯಲ ಬೆಳಕಿನ ಕವಿ ಎ.ಎಸ್. ಮಕಾನದಾರ ಅವರ 'ದರ್ವೇಶಿ ಪದ್ಯ' ಕವನ ಸಂಕಲನ ಆಯ್ಕೆಯಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಆಶ್ರಯದಲ್ಲಿ ವಿವಿಧ ವಾರ್ಷಿಕ ಪ್ರಶಸ್ತಿ ಮತ್ತು ಬಹುಮಾನ ವಿತರಣಾ ಸಮಾರಂಭ ಅ. 17ರಂದು ಬೆಳಿಗ್ಗೆ ಮೈಸೂರಿನಲ್ಲಿ ನಡೆಯಲಿದೆ. ಮೈಸೂರು ದಸರಾ ಪುಸ್ತಕ ಮೇಳದ ಆವರಣದಲ್ಲಿರುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಡಾ. ಕೆ. ಮರುಳುಸಿದ್ದಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಡಾ. ರಾಜಪ್ಪ ದಳವಾಯಿ ಅವರು 'ಹೊನ್ನ ಕಳಸ' ಕಿರುಹೊತ್ತಿಗೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಅಧ್ಯಕ್ಷತೆ ವಹಿಸಲಿದ್ದಾರೆ.

ಪುಸ್ತಕ ಸೊಗಸು ವಿಭಾಗದಲ್ಲಿ ಎ.ಎಸ್. ಮಕಾನದಾರ ಅವರ 'ದರ್ವೇಶಿ ಪದ್ಯ' ಕವನ ಸಂಕಲನದ ಮುಖಪುಟ ವಿನ್ಯಾಸಗೊಳಿಸಿದ ಕಲಾವಿದ ಈಶ್ವರ್ ಬಡಿಗೇರ ಹಾಗೂ ಅಪ್ಪುಗೆರೆ ತಿಮ್ಮರಾಜು ಅವರ ಗ್ರಾಮಗೀತೆಗಳ ಸಂಕಲನದ ಚಿತ್ರ ಕಲಾವಿದ ಶ್ರೀಪಾದ್ ಅವರಿಗೆ ತಲಾ 10 ಸಾವಿರ ರೂ. ನಗದು ಬಹುಮಾನ, ಪ್ರಶಸ್ತಿ ಫಲಕ ಹಾಗೂ ಫಲತಾಂಬೂಲ ನೀಡಿ ಗೌರವಿಸಲಾಗುವುದು.

ಕಳೆದ 22 ವರ್ಷಗಳಿಂದ ನಿರಂತರ ಪ್ರಕಾಶನದ ಮೂಲಕ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಪ್ರಕಟಿಸಿರುವ ಹಿರಿಯ ಸಾಹಿತಿ ಹಾಗೂ ಪ್ರಕಾಶಕ ಎ.ಎಸ್. ಮಕಾನದಾರ ಅವರು ಯುವ ಬರಹಗಾರರಿಗೆ ಮುಕ್ತ ವೇದಿಕೆ ಕಲ್ಪಿಸಿಕೊಟ್ಟಿದ್ದಾರೆ. ಈ ಸಾಧನೆಗಾಗಿ ಗದಗ ಪರಿಸರದ ಸಾಹಿತ್ಯ ಹಾಗೂ ಶಿಕ್ಷಣ ಪ್ರೇಮಿಗಳಾದ ಹಾಸಿಂಸಾಬ ತಹಸೀಲ್ದಾರ್, ಎ.ಆರ್. ಸುಣಗಾರ್, ಶಿಕ್ಷಕ ಗಾಡುಗೋಳಿ ಬಸವರಾಜ್, ಬಡಿಗೇರ ಕಾಂತೇಶ್, ಖಂಡಿ ಬಾಗಿಲ, ಸಾಹಿತಿ ಅಮೀರ್ ನಾಯಕ್, ಮರುಳಸಿದ್ದಪ್ಪ ದೊಡ್ಡಮನಿ, ಶಿರಸ್ತೇದಾರ ಕೆ.ಎಂ. ನದಾಫ್, ಬಸವರಾಜ ಕುಕನೂರ ಹಾಗೂ ಡಾ. ವಿ.ಎಸ್. ಸಪ್ಪಾಳಕರ ಸೇರಿದಂತೆ ಹಲವರು ಎ.ಎಸ್. ಮಕಾನದಾರ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

### ತ್ರಿವಿಧ ದಾಸೋಹಿ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು

# ಬಸವತತ್ವದ ಬೆಳಕು, ಸಮಾಜ ಪರಿವರ್ತನೆಯ ಹರಿಕಾರರು

ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು, ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ ಎಂಬ ಬಸವಣ್ಣನವರ ವಚನದಂತೆ ಬದುಕಿದವರು ನಮ್ಮ ಪೂಜ್ಯ ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು.

ತಮ್ಮ ಶಿವಾನುಭವ ಪ್ರವಚನಗಳ ಮೂಲಕ ಶಿವಶರಣರ ವಚನಗಳ ತತ್ವಗಳನ್ನು ಜನಸಾಮಾನ್ಯರಿಗೆ ಪರಿಚಯಿಸಿ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಪ್ರವಚನಕ್ಕೆ ಮಾತ್ರ ಸೀಮಿತವಾಗದೆ, ಅನ್ನ, ಅಕ್ಷರ ಮತ್ತು ಜ್ಞಾನ ದಾಸೋಹದ ಮೂಲಕ ಸಮಾಜದ ಏಳಿಗೆಗೆ ಶ್ರಮಿಸಿದ ಅವರು ತ್ರಿವಿಧ ದಾಸೋಹಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಶ್ರೇಷ್ಠ ಚೇತನ.

**ತೋಂಟದಾರ್ಯ ಮಠದ ಪರಂಪರೆ**

15ನೇ ಶತಮಾನದಲ್ಲಿ ಸ್ಥಾಪನೆಯಾದ ತೋಂಟದಾರ್ಯ ಮಠವು ಶಿವಯೋಗಿ ಸೂರ್ಯ ಶ್ರೀ ಯಡೆಯೂರು ತೋಂಟದ ಸಿದ್ಧಲಿಂಗ ಯತಿಗಳ ಗುರುಪರಂಪರೆಯನ್ನು ಹೊಂದಿರುವ ಪ್ರಸಿದ್ಧ ಧಾರ್ಮಿಕ ಸಂಸ್ಥೆ. ಲಿಂಗಾಯತ ಪರಂಪರೆಯಲ್ಲಿ ಈ ಮಠಕ್ಕೆ ವಿಶೇಷ ಸ್ಥಾನವಿದೆ.

ಮಠದ 19ನೇ ಪೀಠಾಧಿಪತಿಗಳಾಗಿ 1974ರಿಂದ 2018ರವರೆಗೆ ಸುಮಾರು ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿದ ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು, ಮಠವನ್ನು ಜನಪರ ಹಾಗೂ ಜ್ಞಾನಪರ ಸಂಸ್ಥೆಯಾಗಿ ರೂಪಿಸಿದರು. ಜಾತಿ, ಮತ, ಲಿಂಗಭೇದವಿಲ್ಲದೆ ಎಲ್ಲರಿಗೂ ಸಮಾನ ಅವಕಾಶ ದೊರೆಯಬೇಕು ಎಂಬ ಆಶಯದೊಂದಿಗೆ ಸಮಾಜದಲ್ಲಿ ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಿರಂತರವಾಗಿ ಹೋರಾಡಿದರು.

**ಕೋರವಾರದಿಂದ ಗದಗದ ಮಠದವರೆಗೆ**

ಮೂಲತಃ ವಿಜಯಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಕೋರವಾರ ಗ್ರಾಮದ ಶಂಕ್ರಮ್ಮ ಮತ್ತು ಮರೆಯ್ಯ ದಂಪತಿಯ ಮುದ್ದಿನ ಮಗನಾಗಿ ಜನಿಸಿದ ಶ್ರೀಗಳು, ಬಾಲ್ಯದಿಂದಲೇ ಆಧ್ಯಾತ್ಮಿಕ ಸಂಸ್ಕಾರಗಳನ್ನು ಮೈಗೂಡಿಸಿಕೊಂಡರು. ಹುಬ್ಬಳ್ಳಿಯ ಮುರುಸಾವಿರ ಮಠದಲ್ಲಿ ಶಿಕ್ಷಣ ಪೂರೈಸಿದರು. ಖ್ಯಾತ ಸಂಶೋಧಕ ಹಾಗೂ ಸಾಹಿತಿ ಎಂ.ಎಂ. ಕಲಬುರಗಿ ಅವರ ವಿದ್ಯಾರ್ಥಿಯಾಗಿಯೂ ಗುರುತಿಸಿಕೊಂಡಿದ್ದರು.

1974ರ ಜುಲೈ 29ರಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಗುರುಪರಂಪರೆಯ 19ನೇ ಪೀಠಾಧಿಪತಿಗಳಾಗಿ ಡಂಬಳ–ಗದಗ ಸಂಸ್ಥಾನಮಠದ ಜವಾಬ್ದಾರಿಯನ್ನು ವಹಿಸಿಕೊಂಡರು. ಅವರ ನೇತೃತ್ವದಲ್ಲಿ ಶ್ರೀಮಠವು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೊಸ ಚೈತನ್ಯ ಪಡೆದುಕೊಂಡಿತು.

**ಸಮಾನತೆಯ ಸಮಾಜ ನಿರ್ಮಾಣಕ್ಕೆ ಶ್ರಮ**

ಬಸವಣ್ಣನವರ ಅನುಯಾಯಿಗಳಾಗಿ ಬಸವತತ್ವಗಳನ್ನು ಸಮಾಜ ಸುಧಾರಣೆಯ ಸಾಧನವಾಗಿಸಿಕೊಂಡ ಶ್ರೀಗಳು, ಜಾತಿಭೇದ ಮತ್ತು ಮೂಢನಂಬಿಕೆಗಳ ವಿರುದ್ಧ ಧ್ವನಿ ಎತ್ತಿದರು. ದಲಿತರು, ಬಡವರು ಹಾಗೂ ಹಿಂದುಳಿದ ವರ್ಗದ ಜನರ ಬದುಕಿನಲ್ಲಿ ಬದಲಾವಣೆ ತರಲು ಶ್ರಮಿಸಿದರು.

ಶ್ರೀಮಠದ ಬಾಗಿಲುಗಳನ್ನು ಎಲ್ಲ ಜಾತಿ, ಧರ್ಮ ಮತ್ತು ವರ್ಗದ ಜನರಿಗೆ ಮುಕ್ತಗೊಳಿಸುವ ಮೂಲಕ ಸಾಮಾಜಿಕ ಸಾಮರಸ್ಯಕ್ಕೆ ಮಾದರಿಯಾದರು. ದಲಿತರ ಏಕತೆ, ಸಾಮಾಜಿಕ ನ್ಯಾಯ ಹಾಗೂ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು.

ನ್ಯಾಯನಿಷ್ಠುರತೆ, ನಿರ್ದ್ವಂದ್ವ ನಿಲುವು, ನಿರಾಡಂಬರ ಜೀವನಶೈಲಿ, ಆಧುನಿಕ ಚಿಂತನೆ ಮತ್ತು ಪ್ರಗತಿಪರ ವಿಚಾರಧಾರೆಗಳು ಅವರ ವ್ಯಕ್ತಿತ್ವದ ಪ್ರಮುಖ ಗುಣಗಳಾಗಿದ್ದವು. ಅನೇಕ ಗೌರವಗಳು ಮತ್ತು ಪ್ರಶಸ್ತಿಗಳು ಅರಸಿ ಬಂದರೂ ಹಮ್ಮು–ಬಿಮ್ಮುಗಳಿಲ್ಲದೆ ಸರಳ ಜೀವನ ನಡೆಸಿದ ಅವರು, ಶ್ರೀಮಠದ ಏಳಿಗೆ ಹಾಗೂ ಸಮಾಜದ ಉನ್ನತಿಗಾಗಿ ನಿರಂತರವಾಗಿ ದುಡಿದರು.

**ಕಪ್ಪತ್ತಗುಡ್ಡದ ಪರಿಸರ ರಕ್ಷಣೆಗೆ ಹೋರಾಟ**

ಪರಿಸರ ಸಂರಕ್ಷಣೆಯ ವಿಚಾರದಲ್ಲಿಯೂ ಶ್ರೀಗಳು ತಮ್ಮ ಬದ್ಧತೆಯನ್ನು ತೋರಿಸಿದ್ದರು. ಕಪ್ಪತ್ತಗುಡ್ಡದ ಪರಿಸರ ಮತ್ತು ನೈಸರ್ಗಿಕ ಸಂಪತ್ತನ್ನು ಕಾಪಾಡುವ ಉದ್ದೇಶದಿಂದ ಪೋಸ್ಕೋ ಉಕ್ಕಿನ ಕೈಗಾರಿಕೆ ಸ್ಥಾಪನೆಯ ಪ್ರಸ್ತಾವದ ವಿರುದ್ಧ ಹೋರಾಟ ನಡೆಸಿ,



ಪರಿಸರ ಸಂರಕ್ಷಣೆಯ ಜನಾಂದೋಲನಕ್ಕೆ ಬಲ ತುಂಬಿದರು.

ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಗೆ ಹಾನಿಯಾಗಬಾರದು ಎಂಬ ನಿಲುವನ್ನು ಹೊಂದಿದ್ದ ಅವರು, ಪರಿಸರ ಜಾಗೃತಿ ಮೂಡಿಸುವುದರ ಜೊತೆಗೆ ನೈಸರ್ಗಿಕ ಸಂಪತ್ತಿನ ಸಂರಕ್ಷಣೆಯ ಮಹತ್ವವನ್ನು ಜನರಿಗೆ ತಿಳಿಸಿದರು.

**ಶಿಕ್ಷಣ ಕ್ರಾಂತಿಯ ಹರಿಕಾರರು**

ಗದಗ ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಶ್ರೀಗಳು ನೀಡಿದ ಕೊಡುಗೆ ಅಪಾರ. ಶಿಕ್ಷಣವೇ ಸಮಾಜದ ಬದಲಾವಣೆಗೆ ಬಲವಾದ ಸಾಧನ ಎಂಬ ನಂಬಿಕೆಯಿಂದ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಬಸವೇಶ್ವರ ಶಿಕ್ಷಣ ಸಂಸ್ಥೆಗಳ ಮೂಲಕ ಶಾಲೆ, ಎಂಜಿನಿಯರಿಂಗ್ ಕಾಲೇಜು ಹಾಗೂ ವೃತ್ತಿಪರ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಲು ಶ್ರಮಿಸಿದರು.

ಗ್ರಾಮೀಣ ಭಾಗದ ಮಕ್ಕಳು ಉತ್ತಮ ಶಿಕ್ಷಣ ಪಡೆದು ಭವಿಷ್ಯ ರೂಪಿಸಿಕೊಳ್ಳಬೇಕು ಎಂಬುದು ಅವರ ಆಶಯವಾಗಿತ್ತು. ಶಿಕ್ಷಣದ ಜೊತೆಗೆ ಮಕ್ಕಳಲ್ಲಿ ಬಸವಪ್ರಜ್ಞೆ ಮತ್ತು ವಚನ ಸಂಸ್ಕೃತಿಯನ್ನು ಬೆಳೆಸಲು ವಿಶೇಷ ಕಾಳಜಿ ವಹಿಸಿದರು. ಚಿಕ್ಕ ಮಕ್ಕಳಿಗೆ ವಚನಗಳ ಪರಿಚಯ ಮಾಡಿಸುವುದರ ಜೊತೆಗೆ ವಚನ ಕಂಠಪಾಠ ಸ್ಪರ್ಧೆಗಳನ್ನು ಆಯೋಜಿಸಿ, ವಿಜೇತರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದ್ದರು.

ಈ ಮೂಲಕ ಹೊಸ ತಲೆಮಾರಿನಲ್ಲಿ ಬಸವಣ್ಣನವರ ವಿಚಾರಧಾರೆ, ನೈತಿಕ ಮೌಲ್ಯಗಳು ಮತ್ತು ಸಮಾನತೆಯ ಪ್ರಜ್ಞೆಯನ್ನು ಬಿತ್ತುವ ಕಾರ್ಯ ಮಾಡಿದರು. ಗದಗ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ನಾಂದಿ ಹಾಡಿದ ಅವರು, ನಿಜಕ್ಕೂ ಶಿಕ್ಷಣ ಕ್ರಾಂತಿಯ ಹರಿಕಾರರೆನಿಸಿಕೊಂಡರು.

**ವಚನ ಸಾಹಿತ್ಯ ಮತ್ತು ಕನ್ನಡ ಭಾಷೆಗೆ ಕೊಡುಗೆ**

ಬಸವತತ್ವ ಹಾಗೂ ಲಿಂಗಾಯತ ತತ್ತ್ವಗಳ ಶ್ರೇಷ್ಠ ಪ್ರತಿಪಾದಕರಾಗಿದ್ದ ಶ್ರೀಗಳು, ವಚನ ಸಾಹಿತ್ಯದ ಮಹತ್ವವನ್ನು ಜನರಿಗೆ ತಿಳಿಸುವಲ್ಲಿ ಮಹತ್ತರ ಪಾತ್ರ ವಹಿಸಿದರು.

ಪ್ರತೀ ಸೋಮವಾರ ಶ್ರೀಮಠದಲ್ಲಿ ಧರ್ಮಗ್ರಂಥಗಳ ಪಠಣ, ವಚನ ಚಿಂತನೆ ಸೇರಿದಂತೆ ವಿವಿಧ ಧಾರ್ಮಿಕ ಮತ್ತು ವೈಚಾರಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡುವ ಪ್ರಯತ್ನಗಳಲ್ಲಿಯೂ ಅವಿರತವಾಗಿ ಶ್ರಮಿಸಿದರು. ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಸಾಹಿತ್ಯದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದರು.

ಸಿಂಧಗಿಯಿಂದ ಹೊರಟು ನಾಡಿನಾದ್ಯಂತ ಜ್ಞಾನದ ಬೆಳಕು ಹರಡಿದ ಅವರ ಬದುಕನ್ನು ನೆನಪಿಸುವಾಗ, "ಸಿಂಧಗಿ ತುಂಬಿತೆಲ್ಲಡೆ ಜ್ಞಾನದ ಬಿಂದಿಗೆ" ಎಂಬ ಮಾತು ಅಕ್ಷರಶಃ ಸತ್ಯವೆನಿಸುತ್ತದೆ.

**ಜನಸೇವೆಯಲ್ಲೂ ಮಾದರಿ**

ಶ್ರೀಮಠದ ಜಾತ್ರಾ ಮಹೋತ್ಸವಗಳು ಕೇವಲ ಧಾರ್ಮಿಕ ಆಚರಣೆಗಳಿಗೆ ಸೀಮಿತವಾಗಿರಲಿಲ್ಲ. ಆರೋಗ್ಯ ತಪಾಸಣಾ ಶಿಬಿರ, ಯೋಗ ಶಿಬಿರ, ರಕ್ತದಾನ ಶಿಬಿರ ಸೇರಿದಂತೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರ ಆರೋಗ್ಯ ಮತ್ತು ಕಲ್ಯಾಣಕ್ಕೂ ಆದ್ಯತೆ ನೀಡಲಾಗುತ್ತಿತ್ತು.

ಧರ್ಮ, ಆಧ್ಯಾತ್ಮ, ಶಿಕ್ಷಣ, ಸಾಹಿತ್ಯ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಸೇವೆ ಹೀಗೆ ಹಲವು ಕ್ಷೇತ್ರಗಳಲ್ಲಿ ಶ್ರೀಗಳು ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ ಗುಲ್ಬರ್ಗ ವಿಶ್ವವಿದ್ಯಾಲಯವು 1994ರಲ್ಲಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು.

ಇದಲ್ಲದೆ, 2001ರಲ್ಲಿ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರೀಯ ಕೋಮು ಸೌಹಾರ್ದತೆ ಮತ್ತು ರಾಷ್ಟ್ರೀಯ ಏಕತೆಗೆ ಸಂಬಂಧಿಸಿದ ಪ್ರಶಸ್ತಿಯನ್ನು ಸ್ವೀಕರಿಸಿದ ಅವರು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಕನ್ನಡ ಜಗದ್ಗುರು ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳಿಗೆ ಭಾಜನರಾದರು.

**ಮರೆಯಲಾಗದ ಮಹಾನ್ ಚೇತನ**

ಜೀವನದುದ್ದಕ್ಕೂ ಬಸವತತ್ವಗಳನ್ನು ಸಾರಿದ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಗೌರವಯುತ ಬದುಕು ದೊರೆಯಬೇಕು ಎಂದು ಬಯಸಿದ, ಶಿಕ್ಷಣದ ಮೂಲಕ ಸಮಾಜವನ್ನು ಬೆಳಗಿಸಿದ ಈ ಮಹಾನ್ ಚೇತನರು 2018ರ ಅಕ್ಟೋಬರ್ 20ರಂದು ಇಹಲೋಕ ತ್ಯಜಿಸಿದರು. ಅವರ ಅಗಲಿಕೆ ಭಕ್ತ ಸಮೂಹಕ್ಕೆ ತುಂಬಲಾರದ ನಷ್ಟವಾದರೂ, ಅವರು ಬಿಟ್ಟುಹೋದ ವಿಚಾರಧಾರೆ, ಆದರ್ಶಗಳು ಮತ್ತು ಸಮಾಜಮುಖಿ ಕಾರ್ಯಗಳು ಇಂದಿಗೂ ಜೀವಂತವಾಗಿವೆ.

ಶರಣರ ಬದುಕಿನಲ್ಲಿ ಮರಣವನ್ನು ಮಹಾನವಮಿಯಂತೆ ಕಾಣುವ ತತ್ವದ ಆಶಯವನ್ನು ನೆನಪಿಸುವಂತೆ, ಶ್ರೀಗಳ ದೇಹ ನಮ್ಮೊಂದಿಗಿಲ್ಲದಿದ್ದರೂ ಅವರ ಸೇವೆ ಮತ್ತು ಸಾಧನೆಗಳು ಎಂದೆಂದಿಗೂ ಅಜರಾಮರ.

**ನನ್ನ ಬದುಕಿಗೆ ದಾರಿದೀಪವಾದ ಶ್ರೀಗಳು**

ನಾನು ಬಾಲ್ಯದಿಂದಲೂ ಶ್ರೀಮಠದ ಆವರಣದಲ್ಲಿ ವಚನ ಮತ್ತು ಸಂಗೀತವನ್ನು ಕಲಿಯುತ್ತಿದ್ದ ಸಂದರ್ಭದಲ್ಲಿ ಶ್ರೀಗಳು ನೀಡಿದ ಪ್ರೋತ್ಸಾಹ, ಪ್ರೀತಿ ಹಾಗೂ ಘನವಾದ ಆಶೀರ್ವಾದ ನನ್ನ ಬದುಕಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿವೆ. ಜೀವನದಲ್ಲಿ ಎಂತಹ ಪರಿಸ್ಥಿತಿ ಎದುರಾದರೂ ಅದನ್ನು ಧೈರ್ಯದಿಂದ ಎದುರಿಸಿ ಗೆಲ್ಲಬಹುದು ಎಂಬ ಆತ್ಮವಿಶ್ವಾಸವನ್ನು ಅವರು ನನ್ನಲ್ಲಿ ಮೂಡಿಸಿದರು. ನನ್ನಂತಹ ಅನೇಕರ ಬದುಕಿಗೆ ಸ್ಫೂರ್ತಿಯಾದ ಶ್ರೀಗಳು ಕೇವಲ ಧಾರ್ಮಿಕ ಗುರುಗಳಲ್ಲ, ಬದುಕಿನ ದಾರಿಯನ್ನು ತೋರಿಸಿದ ಮಾರ್ಗದರ್ಶಕರು. ಅವರ ಪ್ರೀತಿ, ಆಶೀರ್ವಾದ ಮತ್ತು ಆದರ್ಶಗಳನ್ನು ಸ್ಮರಿಸುತ್ತಾ, ಅವರು ತೋರಿದ ಹಾದಿಯಲ್ಲಿ ನಡೆಯುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಭಾವಿಸುತ್ತೇನೆ. ತ್ರಿವಿಧ ದಾಸೋಹಿ, ಬಸವತತ್ವದ ಪ್ರತಿಪಾದಕ, ಶಿಕ್ಷಣಪ್ರೇಮಿ, ಪರಿಸರ ಹೋರಾಟಗಾರ ಹಾಗೂ ಸಮಾನತೆಯ ಸಮಾಜದ ಕನಸುಗಾರರಾದ ಪೂಜ್ಯ ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು ಸದಾ ನಮ್ಮ ಹೃದಯಗಳಲ್ಲಿ ನೆಲೆಸಿರುತ್ತಾರೆ.

ಶರಣು ಶರಣಾರ್ಥಿಗಳು.

–ಶಿಲ್ಪಾ ಮೃತ್ಯುಂಜಯ ಮಿಣಜಗಿ, ಧಾರವಾಡ

### ಎರೆಹುಳು ಗೊಬ್ಬರ, ನೈಸರ್ಗಿಕ ಕೀಟನಾಶಕ ಬಳಕೆಗೆ ವೀರೇಶ ನೇಗಲಿ ಕರೆ

# ಸಾವಯವ ಕೃಷಿಯೇ ರೈತನ ಬದುಕಿಗೆ ಭರವಸೆ

ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಣ್ಣಿನ ಫಲವತ್ತತೆ ಕಾಪಾಡಿ ಸುಸ್ಥಿರ ಇಳುವರಿ ಪಡೆಯಲು ಸಾವಯವ ಕೃಷಿ ಹಾಗೂ ವೈಜ್ಞಾನಿಕ ನೀರಿನ ನಿರ್ವಹಣೆ ಅತ್ಯಗತ್ಯ ಎಂದು ಕೋಟುಮಚಗಿಯ ಪ್ರಗತಿಪರ ಸಾವಯವ ಕೃಷಿಕ ವೀರೇಶ ನೇಗಲಿ ಹೇಳಿದರು.

ಪಟ್ಟಣದ ಅನ್ನದಾನೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಐಕ್ಯೂಎಸಿ ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಆಶ್ರಯದಲ್ಲಿ ಸೋಮವಾರ ಆಯೋಜಿಸಿದ್ದ 'ಎರೆಹುಳು ತಂತ್ರಜ್ಞಾನ: ನಿಸರ್ಗದ ಮಣ್ಣಿನ ಎಂಜಿನಿಯರ್‌ಗಳ ಜೀವಶಾಸ್ತ್ರ ಮತ್ತು ಎರೆಹುಳು ಗೊಬ್ಬರ ತಯಾರಿಕೆ ವಿಧಾನಗಳ ಅನ್ವೇಷಣೆ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎರೆಹುಳುಗಳು ಮಣ್ಣಿನ ಫಲವತ್ತತೆ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಎರೆಹುಳು ಗೊಬ್ಬರ ಮತ್ತು ಎರೆಜಲದ ಬಳಕೆಯಿಂದ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆ ಕಡಿಮೆ ಮಾಡಬಹುದು. ಮಣ್ಣಿನಲ್ಲಿ ಇಂಗಾಲ ಹಾಗೂ ತೇವಾಂಶ ಉಳಿಸಿಕೊಳ್ಳಲು ಬಯೋಚಾರ್ ನೆರವಾಗುತ್ತದೆ. ಬೇವು ಮತ್ತು ದಶಪರ್ಣಿ ಕಷಾಯದಂತಹ ನೈಸರ್ಗಿಕ ಕೀಟನಾಶಕಗಳ ಬಳಕೆಯಿಂದ ಮಣ್ಣಿನ ಜೀವವೈವಿಧ್ಯ ಕಾಪಾಡಿ ಪರಿಸರಸ್ನೇಹಿ ಕೃಷಿಗೆ ಉತ್ತೇಜನ ನೀಡಬಹುದು ಎಂದು ತಿಳಿಸಿದರು.



ಕೃಷಿಯಲ್ಲಿ ನೀರಿನ ಮಿತಬಳಕೆಯ ಮಹತ್ವ ವಿವರಿಸಿದ ಅವರು, ಇಸ್ರೇಲಿ ಹನಿ ನೀರಾವರಿ ಪದ್ಧತಿಯು ನೀರನ್ನು ಸಮರ್ಪಕವಾಗಿ ಬಳಸಲು ಸಹಕಾರಿಯಾಗಿದೆ. ಮಣ್ಣಿನ ಸವೆತ ತಡೆದು ಮಳೆನೀರು ಭೂಮಿಯಲ್ಲಿ ಇಂಗುವಂತೆ ಮಾಡುವ ಸಾಂಪ್ರದಾಯಿಕ ಚೌಕಮಡಿ ಪದ್ಧತಿಯೂ ಪರಿಣಾಮಕಾರಿಯಾಗಿದೆ. ಸಾವಯವ ಗೊಬ್ಬರ, ನೈಸರ್ಗಿಕ ಕೀಟನಿಯಂತ್ರಣ ಹಾಗೂ ವೈಜ್ಞಾನಿಕ ನೀರಿನ ನಿರ್ವಹಣೆಯನ್ನು ಸಮನ್ವಯಗೊಳಿಸಿದಾಗ ಮಣ್ಣಿನ ಆರೋಗ್ಯ ಸುಧಾರಿಸುವುದರೊಂದಿಗೆ ಸುಸ್ಥಿರ ಕೃಷಿಗೆ ಬಲ ದೊರೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಎರೆಹುಳು ಗೊಬ್ಬರ ತಯಾರಿಕೆಯ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಾಯಿತು. ಕೃಷಿಯಲ್ಲಿ ಪ್ರಕೃತಿಯ ಪಾತ್ರ, ಎರೆಹುಳುಗಳ ಮಹತ್ವ ಹಾಗೂ ಸಾವಯವ ಗೊಬ್ಬರ ತಯಾರಿಕೆಯ ವಿಧಾನಗಳನ್ನು ಪ್ರಾಯೋಗಿಕವಾಗಿ ತಿಳಿಸಿಕೊಡಲಾಯಿತು.

ಪ್ರಾಚಾರ್ಯ ಕೆ.ಎಸ್. ಹಿರೇಮಠ ಮಾತನಾಡಿ, ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ ಪಡೆಯುವುದಕ್ಕೆ ಸೀಮಿತವಾಗದೆ ಮಣ್ಣಿನ ಗುಣಧರ್ಮ ಮತ್ತು ಆಧುನಿಕ ಕೃಷಿ ತಂತ್ರಜ್ಞಾನವನ್ನು ಅರಿತು ಕೃಷಿಯತ್ತ ಆಸಕ್ತಿ ಬೆಳೆಸಿಕೊಳ್ಳಬೇಕು. ಯುವಜನರ ನಾವೀನ್ಯತೆ ಹಾಗೂ ವೈಜ್ಞಾನಿಕ ದೃಷ್ಟಿಕೋನ ಸಾಂಪ್ರದಾಯಿಕ ಕೃಷಿಗೆ ಹೊಸ ಆಯಾಮ ನೀಡಬಲ್ಲದು. ಶಿಕ್ಷಣವನ್ನು ಜಮೀನಿನೊಂದಿಗೆ ಬೆಸೆಯುವ ಮೂಲಕ ಯುವಕರು ಸ್ವಾಭಿಮಾನಿ ಹಾಗೂ ಯಶಸ್ವಿ ಕೃಷಿ ಉದ್ಯಮಿಗಳಾಗಿ ಬೆಳೆಯಬೇಕು. ಇದರಿಂದ ದೇಶದ ಆಹಾರ ಭದ್ರತೆಗೂ ಮಹತ್ವದ ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕ ಡಿ.ಎಲ್. ಪವಾರ, ಕಾರ್ಯಕ್ರಮ ಸಂಯೋಜಕ ಋಷಿಕೇಶ ಜಿ. ಪವಾರ, ಸಹಾಯಕ ಪ್ರಾಧ್ಯಾಪಕರಾದ ಸಂದೀಪಕುಮಾರ ಬಿ., ಸಂಕೇತ ಹೊಟ್ಟಿ, ಆರ್.ಬಿ. ಕಟ್ನಳ್ಳಿ ಹಾಗೂ ಜೆ.ಎ. ಪಾಟೀಲ ಉಪಸ್ಥಿತರಿದ್ದರು.

> ವಿದ್ಯಾರ್ಥಿಗಳು ಕೇವಲ ಪದವಿ ಪ್ರಮಾಣಪತ್ರ ಪಡೆಯುವುದಕ್ಕೆ ಸೀಮಿತವಾಗದೆ, ಮಣ್ಣಿನ ಗುಣಧರ್ಮ ಮತ್ತು ಆಧುನಿಕ ಕೃಷಿ ತಂತ್ರಜ್ಞಾನವನ್ನು ಅರಿತು ವ್ಯವಸಾಯದತ್ತ ಆಸಕ್ತಿ ಬೆಳೆಸಿಕೊಳ್ಳಬೇಕು. ಶಿಕ್ಷಣವನ್ನು ಜಮೀನಿನೊಂದಿಗೆ ಬೆಸೆಯುವ ಮೂಲಕ ಯುವಕರು ಸ್ವಾಭಿಮಾನಿ ಹಾಗೂ ಯಶಸ್ವಿ ಕೃಷಿ ಉದ್ಯಮಿಗಳಾಗಿ ಬೆಳೆಯಬೇಕು.
> – **ಕೆ.ಎಸ್. ಹಿರೇಮಠ,** ಪ್ರಾಚಾರ್ಯರು

# ಆನೆಕಾಲು ರೋಗ ಪತ್ತೆಗೆ ರಾತ್ರಿ ರಕ್ತ ಪರೀಕ್ಷೆ

ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ರೋಗ ಉಲ್ಬಣಿಸಿದ ಬಳಿಕ ಚಿಕಿತ್ಸೆ ಪಡೆಯುವುದಕ್ಕಿಂತ, ಆರಂಭದಲ್ಲಿಯೇ ರೋಗದ ಸುಳಿವು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡುವುದು ಅಮೂಲ್ಯ ಜೀವಗಳನ್ನು ಕಾಪಾಡುವ ಮಹತ್ವದ ಹೆಜ್ಜೆಯಾಗಿದೆ. ಈ ನಿಟ್ಟಿನಲ್ಲಿ ನರೇಗಲ್ಲ ಪಟ್ಟಣದಲ್ಲಿ ಆನೆಕಾಲು ರೋಗ ಪತ್ತೆಗಾಗಿ ರಾತ್ರಿ ರಕ್ತಲೇಪನ ಸಂಗ್ರಹಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಡಾ. ಚಿದಾನಂದ ಮುಂಡಾಸದ ಚಾಲನೆ ನೀಡಿದರು. ಅನುಷ್ಠಾನಾಧಿಕಾರಿ ಡಾ. ಎಚ್.ಎಲ್. ಗಿರೆಡ್ಡಿ ಅವರ ನೇತೃತ್ವದಲ್ಲಿ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ. ಬಿ.ಎಸ್. ಭಜಂತ್ರಿ ಅವರ ಮಾರ್ಗದರ್ಶನದಲ್ಲಿ ಆರೋಗ್ಯ ಇಲಾಖೆ ಈ ಕಾರ್ಯ ಕೈಗೊಂಡಿತು.

ಉದ್ಯೋಗ ಅರಸಿ ದೂರದ ರಾಜ್ಯಗಳಿಂದ



ನರೇಗಲ್ಲ ಭಾಗಕ್ಕೆ ಆಗಮಿಸುವ ಕಾರ್ಮಿಕರು ಸ್ಥಳೀಯ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಆರೋಗ್ಯದ ಕಾಳಜಿಯೂ ಸಮಾಜದ ಜವಾಬ್ದಾರಿಯಾಗಿದೆ. ವಿಂಡ್ ಪವರ್ ಘಟಕಗಳ ಕಾಮಗಾರಿಗಳಿಗಾಗಿ ವಿವಿಧ ರಾಜ್ಯಗಳಿಂದ ಆಗಮಿಸುತ್ತಿರುವ ಕಾರ್ಮಿಕರಲ್ಲಿ ಆನೆಕಾಲು ರೋಗದ ಸೋಂಕಿನ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮವಾಗಿ ತಪಾಸಣೆ ನಡೆಸಲಾಗುತ್ತಿದೆ.

ಈ ಕುರಿತು ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿ ಮಂಜುನಾಥ ಜಾಲಿಹಾಳ, ರೋಗದ ಲಕ್ಷಣಗಳು ಗಂಭೀರ ಸ್ವರೂಪ ಪಡೆಯುವ ಮೊದಲೇ ಸೋಂಕನ್ನು ಪತ್ತೆಹಚ್ಚಿ, ಅಗತ್ಯವಿರುವವರಿಗೆ ಸೂಕ್ತ ಚಿಕಿತ್ಸೆ ಒದಗಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ, ಇಂತಹ ತಪಾಸಣಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ರೋಗ ನಿಯಂತ್ರಣಕ್ಕೆ ಸಹಕರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಗೀತ ಮುಚ್ಚಂಡಿ, ವಿಜಯಲಕ್ಷ್ಮಿ ಪೊಲೀಸ್ ಪಾಟೀಲ, ರೇಷ್ಮಾ ಓಲೆಕಾರ, ರೈಮತ್ ಭಾನು ಶರಬತ್‌ವಾಲ್, ಆದರ್ಶ ಪೂಜಾರ, ಚಂದ್ರು ಗಂಗರಗೊಂಡ ಸೇರಿದಂತೆ ಆರೋಗ್ಯ ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.

### 14416ಕ್ಕೆ ಕರೆ ಮಾಡಿ ಉಚಿತ ಸಲಹೆ, ಚಿಕಿತ್ಸೆ ಪಡೆಯಿರಿ

# ಮಾನಸಿಕ ಸಮಸ್ಯೆಗಳಿಗೆ ಟೆಲಿ ಮನಸ್ ಸಹಕಾರಿ

ವಿಜಯಸಾಕ್ಷಿ ಸುದ್ದಿ, ಗದಗ

ಕೌಟುಂಬಿಕ ಸಮಸ್ಯೆ, ಮಾದಕ ವಸ್ತುಗಳ ವ್ಯಸನ, ದುಃಖ, ಪರೀಕ್ಷಾ ಒತ್ತಡ, ಜ್ಞಾಪಕಶಕ್ತಿ ತೊಂದರೆ ಹಾಗೂ ಆತ್ಮಹತ್ಯೆಯ ಆಲೋಚನೆಗಳಿಂದ ಬಳಲುತ್ತಿರುವವರು ಸೇರಿದಂತೆ ವಿವಿಧ ಮಾನಸಿಕ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರು ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದ ಉಚಿತ ಸಹಾಯವಾಣಿ 14416ಕ್ಕೆ ಕರೆ ಮಾಡಿ ಸಲಹೆ ಮತ್ತು ನೆರವು ಪಡೆಯಬಹುದು ಎಂದು ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಡಾ. ರಾಜೇಂದ್ರ ಎಸ್. ಗಡಾದ ಹೇಳಿದರು.

ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಟೆಲಿ ಮನಸ್ ಸೇವೆ ಹೆಚ್ಚು ಸಹಕಾರಿಯಾಗಿದೆ ಎಂದರು.

ಕೆ.ಎಚ್. ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ತರಬೇತಿ ವೈದ್ಯ ಡಾ. ದಕ್ಷತ್ ಅವರು ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಕಾಯಿಲೆಗಳಿಗೆ ಕಾರಣಗಳು, ತೀವ್ರ




ಸ್ವರೂಪದ ಮನೋರೋಗಗಳು ಹಾಗೂ ಅವುಗಳ ಲಕ್ಷಣಗಳ ಕುರಿತು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತರಬೇತಿ ವೈದ್ಯ ಡಾ. ಮಂಜುನಾಥ್ ಪಾಟೀಲ್ ಅವರು ಮಾನಸಿಕ ಕಾಯಿಲೆಗಳಿಗೆ ಲಭ್ಯವಿರುವ ಚಿಕಿತ್ಸಾ ವಿಧಾನಗಳು ಮತ್ತು ಚಿಕಿತ್ಸೆಯ ಅವಧಿಯ ಕುರಿತು ಮಾಹಿತಿ ನೀಡಿದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಲತಾ ಸಾಗರ್ ಸ್ವಾಗತಿಸಿ, ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಉದ್ದೇಶವನ್ನು ಪ್ರಸ್ತಾಪಿಸಿದರು. ವಂದನಾ ಶೆಟ್ಟಿಗಾರ ಕಾರ್ಯಕ್ರಮ ನಿರೂಪಿಸಿದರು. ಪ್ರಯೋಗಾಲಯ ತಂತ್ರಜ್ಞ ಅಧಿಕಾರಿ ಅಲ್ವಿನ್ ಕಲ್ಲಳ್ಳಿ ಅತಿಥಿಗಳನ್ನು ಪರಿಚಯಿಸಿದರು. ಜೀವನ ಸಾಬ್ ಬಿನ್ನಾಳ್ ವಂದಿಸಿದರು. ಕಾರ್ಯಕ್ರಮದಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು.

# ದೇಶಪ್ರೇಮದ ಕಥೆ ಟೆಲಿಫಿಲ್ಮ್!

ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಸಿದ್ದುಕೃಷ್ಣ ಕ್ರಿಯೇಷನ್ಸ್, ಸಂಶಿ ಅರ್ಪಿಸುವ 'ದೇಶ ಪ್ರೇಮ' ಟೆಲಿಫಿಲ್ಮ್‌ನ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕರಾದ ಶ್ರೀಮತಿ ರೇಖಾ ಸಿದ್ದುಕೃಷ್ಣ ಹಾಗೂ ಶ್ರೀಮತಿ ರಾಧಿಕಾ ಮಹೇಶಗೌಡ ತಿಳಿಸಿದ್ದಾರೆ.

ದೇಶಪ್ರೇಮದ ಕಥಾವಸ್ತುವನ್ನು ಹೊಂದಿರುವ ಈ ಟೆಲಿಫಿಲ್ಮ್‌ನ ಹೆಚ್ಚಿನ ಚಿತ್ರೀಕರಣವನ್ನು ಲ್ಯಾನ್ಸ್ ನಾಯಕ ವೀರಯೋಧ ಹನುಮಂತಪ್ಪ ಕೊಪ್ಪದ ಅವರ ಜನ್ಮಸ್ಥಳ ಬೆಟದೂರ ಗ್ರಾಮದಲ್ಲಿ ನಡೆಸಲಾಗಿದೆ. ಇದರೊಂದಿಗೆ ಸಂಶಿ, ಕುಂದಗೋಳ, ಹುಬ್ಬಳ್ಳಿ, ಧಾರವಾಡ, ಲಕ್ಷ್ಮೇಶ್ವರ, ಮತ್ತಿಗಟ್ಟಿ ಹಾಗೂ ಹಂಚಿನಾಳ ಗ್ರಾಮಗಳಲ್ಲಿಯೂ ಚಿತ್ರೀಕರಣ ಮಾಡಲಾಗಿದೆ.

ಟೆಲಿಫಿಲ್ಮ್‌ನಲ್ಲಿ ಸಾತ್ವಿಕ್ ಢೇಕಣೆ ನಾಯಕನಾಗಿ, ಫಾಲ್ಗುಣಿ ನಾಯಕಿಯಾಗಿ ಅಭಿನಯಿಸಿದ್ದಾರೆ. ವಿಶೇಷ ಪಾತ್ರದಲ್ಲಿ ಮಹೇಶ್ ಗೌಡ ಪಾಟೀಲ್ ಹಾಗೂ ಖ್ಯಾತ ನಟ, ನಿರ್ದೇಶಕ ಸುಶೀಲ್ ಮೊಕಾಶಿ ಕಾಣಿಸಿಕೊಂಡಿದ್ದಾರೆ.



ಉಳಿದ ತಾರಾಗಣದಲ್ಲಿ ಸಿದ್ದುಕೃಷ್ಣ, ದೀಪಾ ವಸ್ತ್ರದ, ಗೋವಿಂದ್ ಮಾಂಡ್ರೆ, ಲಲಿತಾ ಮತ್ತಿಕೊಪ್ಪ, ಎಚ್. ಬಸವಂತ, ವಿಜಯ್ ಕುಂದಗೋಳ, ಶಿವಪ್ಪ ನರಗುಂದ ನೂಲ್ವಿ, ಯಲ್ಲಪ್ಪ ಡೊಳ್ಳಿನ, ಚನ್ನಯ್ಯ ಹಿರೇಮಠ ಇಟಿಗಟ್ಟಿ, ವೀರನಗೌಡ ಹೊಸಮನಿ, ಗಂಗಾ ಬ್ಯಾಹಟ್ಟಿ, ಗೀತಾ ಪೊಲೀಸ್ ಪಾಟೀಲ್, ನಿಶ್ಚರಾ ಪಾಟೀಲ್, ಪ್ರತೀಕ್ಷಾ ನಡೂರಮಠ, ಭೂಮಿಕಾ ಮಜ್ಜಿಗುಡ್ಡ, ನಯನಾ ವೀರೇಶ್, ನಿವೇದಿತಾ ತದಾನಿ, ಅಜಯ್ ಪ್ರಭು, ಎನ್. ಮಹಾಂತೇಶ್, ಚನ್ನಯ್ಯ ಹಿರೇಮಠ, ಬಿ. ಮಂಜುನಾಥ, ವೀರನಗೌಡ ಕೊಳೂರ, ಸಿದ್ದರಾಮಯ್ಯ, ಶಕ್ತಿ ಪ್ರಸಾದ್, ಅಭಿಷೇಕ್, ಬೇಬಿ ಪ್ರಗತಿ, ಬೇಬಿ ಶಾಂತಾ ಹಾಗೂ ಮಾಸ್ಟರ್ ಆರವ್ ಸೇರಿದಂತೆ ಅನೇಕರು ಅಭಿನಯಿಸಿದ್ದಾರೆ.

## ಸಣ್ಣ ಸುದ್ದಿಗಳು



ಗದಗ: ಶರನ್ನವರಾತ್ರಿ ಅಂಗವಾಗಿ ನಗರೇಶ್ವರ ದೇವಸ್ಥಾನದಲ್ಲಿ ಗುರುವಾರ ಆರ್ಯವೈಶ್ಯ ಕುಲದೇವತೆ ಶ್ರೀ ಕನ್ಯಕಾಪರಮೇಶ್ವರಿ ದೇವಿಗೆ ಪದ್ಮಾವತಿ ದೇವಿ ಅಲಂಕಾರ ಮಾಡಲಾಗಿದ್ದು, ಭಕ್ತರ ಗಮನ ಸೆಳೆಯಿತು.

## ಉಚ್ಚಂಗೆಮ್ಮದೇವಿ ಪುರಾಣ ಪ್ರವಚನ



ವಿಜಯಸಾಕ್ಷಿ ಸುದ್ದಿ, ಹೂವಿನಹಡಗಲಿ ತಾಲೂಕಿನ ನಾಗತಿಬಸಾಪುರ ಗ್ರಾಮದ ಶ್ರೀ ಉಚ್ಚಂಗೆಮ್ಮದೇವಿ ದೇವಸ್ಥಾನದಲ್ಲಿ 24ನೇ ವರ್ಷದ ಪುರಾಣ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ನಡೆಯುತ್ತಿವೆ.

ತೆಗ್ಗಿನಮಠ ಹರಪನಹಳ್ಳಿಯ ಶ್ರೀ ಷಟಸ್ಥಲ ಬ್ರಹ್ಮಿ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ನಾಗತಿಬಸಾಪುರದ ಶ್ರೀ ಸದ್ಗುರು ಶಿವಯೋಗಿ ತೆಗ್ಗಿನಮಠದ ಗಿರಿರಾಜ ಹಾಲಸ್ವಾಮಿಗಳ ಕೃಪಾಶೀರ್ವಾದದೊಂದಿಗೆ ನವರಾತ್ರಿ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಅ. 11ರಿಂದ ಆರಂಭವಾಗಿರುವ ಪುರಾಣ ಪ್ರವಚನ ಪ್ರತಿದಿನ ರಾತ್ರಿ 8.30ಕ್ಕೆ ನಡೆಯುತ್ತಿದೆ.

ಪುರಾಣ ಪ್ರವಚನವನ್ನು ಪಂಡಿತ ಪುಟ್ಟರಾಜ ಗವಾಯಿಗಳ ಶಿಷ್ಯರಾದ ಹಿರೇಮಠ ತಿಮ್ಮೇನಹಳ್ಳಿಯ ವೇದಮೂರ್ತಿ ಮೃತ್ಯುಂಜಯ ಶಾಸ್ತ್ರಿಗಳು ನಡೆಸಿಕೊಡುತ್ತಿದ್ದಾರೆ. ತಬಲಾ ವಾದಕರಾಗಿ ಮುಂಡರಗಿಯ ನಿವೃತ್ತ ಸಂಗೀತ ಶಿಕ್ಷಕ ಎಂ.ಎಚ್. ಬೆಟಗೇರಿ ಹಾಗೂ ಝಾಕೀರಹುಸೇನ ಎಂ. ಬೆಟಗೇರಿ ಸಹಕರಿಸುತ್ತಿದ್ದಾರೆ. ಇಬ್ಬರೂ ಪಂಡಿತ ಪುಟ್ಟರಾಜ ಗವಾಯಿಗಳ ಶಿಷ್ಯರಾಗಿರುವುದು ವಿಶೇಷವಾಗಿದೆ.

ಪುರಾಣದ ಐದನೇ ದಿನದಂದು ದೇವಿಯನ್ನು ಸ್ಕಂದಮಾತೆಯ ರೂಪದಲ್ಲಿ ಪೂಜಿಸಲಾಯಿತು. ತಾರಕಾಸುರನ ಸಂಹಾರದ ಮೂಲಕ ಲೋಕಕಲ್ಯಾಣ ಮಾಡಿದ ಸ್ಕಂದಮಾತೆಯ ಮಹಿಮೆಯನ್ನು ಪ್ರವಚನದಲ್ಲಿ ವಿವರಿಸಲಾಯಿತು. ಭಕ್ತಿಯಿಂದ ದೇವಿಯನ್ನು ಆರಾಧಿಸಿದರೆ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಸುಗನಹಳ್ಳಿ ಗ್ರಾಮದ ಶಿಕ್ಷಕ ಹಾಲೇಶ ಎಸ್. ಜಕ್ಕಲಿ, ಭಕ್ತ ಶಿವಲಿಂಗಪ್ಪ ಜಕ್ಕಲಿ ಹಾಗೂ ನಾರಾಯಣಪುರದ ಶಿವನಗೌಡ ಪಾಟೀಲ ಅವರು ಪುರಾಣ ಆಲಿಸಲು ಆಗಮಿಸಿದ್ದು, ಗ್ರಾಮಸ್ಥರು ಅವರನ್ನು ಗೌರವಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಆಗಮಿಸಿದ ಭಕ್ತರು ಗ್ರಾಮದ ಸತ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಅ. 20ರಂದು ಆಯುಧ ಪೂಜೆ ನಡೆಯಲಿದ್ದು, ಅ. 21ರಂದು ಬನ್ನಿ ಮುಡಿಯುವ ಕಾರ್ಯಕ್ರಮದೊಂದಿಗೆ ಪುರಾಣ ಮುಕ್ತಾಯಗೊಳ್ಳಲಿದೆ.

ಪ್ರತಿದಿನ ಪುರಾಣದ ಬಳಿಕ ದಾನಿಗಳ ಸಹಕಾರದಿಂದ ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗುವಂತೆ ಉಚ್ಚಂಗೆಮ್ಮ ಸೇವಾ ಸಮಿತಿಯ ಸದಸ್ಯರು ಹಾಗೂ ಗ್ರಾಮದ ಭಕ್ತರು ಮನವಿ ಮಾಡಿದ್ದಾರೆ.

### ಅಮೂಲ್ಯ ದತ್ತು ಕೇಂದ್ರದಿಂದ 71ನೇ ಮಗುವಿಗೆ ಹೊಸ ಬದುಕಿನ ಭರವಸೆ

# ಅನಾಥ ಮಕ್ಕಳ ಬದುಕಿಗೆ ಬೆಳಕಾದ ಸೇವಾಭಾರತಿ

ವಿಜಯಸಾಕ್ಷಿ ಸುದ್ದಿ, ಗದಗ

ಅನಾಥ ಮಕ್ಕಳಿಗೆ ಪ್ರೀತಿಯ ಮಡಿಲು, ಭದ್ರ ಭವಿಷ್ಯ ಹಾಗೂ ಬದುಕಿನ ಭರವಸೆ ನೀಡುವ ಮೂಲಕ ಸೇವಾಭಾರತಿಯ ಅಮೂಲ್ಯ ವಿಶೇಷ ದತ್ತು ಸ್ವೀಕಾರ ಕೇಂದ್ರ ಮಕ್ಕಳ ಜೀವನಕ್ಕೆ ಹೊಸ ಅರ್ಥ ನೀಡುತ್ತಿದೆ ಎಂದು ನರಸಾಪುರದ ಅನ್ನದಾನೇಶ್ವರ ಶಾಖಾಮಠದ ಪೂಜ್ಯ ಡಾ. ವೀರಭದ್ರೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಗದಗ-ಬೆಟಗೇರಿಯ ಸೇವಾಭಾರತಿಯ ಅಮೂಲ್ಯ ವಿಶೇಷ ದತ್ತು ಸ್ವೀಕಾರ ಕೇಂದ್ರದಲ್ಲಿ ಗುರುವಾರ ನಡೆದ 71ನೇ ಮಗುವಿನ ದತ್ತುಪೂರ್ವ ಪೋಷಕತ್ವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಹಾತ್ಮರ ಜನ್ಮದ ಹಿನ್ನೆಲೆಗಿಂತ ಅವರ ತತ್ವ, ಆದರ್ಶ ಮತ್ತು ಸಾಧನೆಗಳು ಜಗತ್ತಿಗೆ ಮುಖ್ಯವಾಗುತ್ತವೆ. ಅದೇ ರೀತಿ ಮಗುವಿನ ಜನ್ಮದ ಹಿನ್ನೆಲೆಗಿಂತ ಅದರ ಭವಿಷ್ಯ, ವ್ಯಕ್ತಿತ್ವ ಮತ್ತು ಸಾಧನೆಗಳಿಗೆ ಮಹತ್ವ ನೀಡಬೇಕು. ದತ್ತು ಪಡೆದ ಮಗುವಿಗೆ ಪ್ರೀತಿ, ವಿಶ್ವಾಸ ಮತ್ತು ಆತ್ಮಗೌರವದ ವಾತಾವರಣ ಕಲ್ಪಿಸುವುದು ಪೋಷಕರ ಆದ್ಯ ಕರ್ತವ್ಯವಾಗಿದೆ. ಮಗುವಿನ ಘನತೆ ಮತ್ತು ಗೌಪ್ಯತೆಯನ್ನು ಗೌರವಿಸುವ ಮೂಲಕ ಅದರ ಪ್ರತಿಭೆ ಅರಳಲು ಅವಕಾಶ ನೀಡಬೇಕು ಎಂದರು.




ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಪ್ರೀತಿ ಮತ್ತು ಮಾನವೀಯತೆಯ ಪಾಠವನ್ನೂ ಕಲಿಸಬೇಕು. ಸಮಾಜದಲ್ಲಿ ಪ್ರತಿಯೊಂದು ಮಗುವಿಗೂ ಸಮಾನ ಅವಕಾಶ ದೊರೆತಾಗ ಮಾತ್ರ ಸಮಾನತೆ ಮತ್ತು ಸಹಬಾಳ್ವೆಯ ಕನಸು ಸಾಕಾರಗೊಳ್ಳುತ್ತದೆ. ದತ್ತು ಪಡೆದ ಮಗು ಉತ್ತಮ ಸಂಸ್ಕಾರಗಳನ್ನು ಮೈಗೂಡಿಸಿಕೊಂಡು ಬೆಳೆದು ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಕೀರ್ತಿ ತರಲಿ ಎಂದು ಪೋಷಕರಿಗೆ ಶುಭ ಹಾರೈಸಿದರು.

ಗದಗ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಯದೇವಿ ಕವಲೂರ ಮಾತನಾಡಿ, ದತ್ತು ಸ್ವೀಕಾರವೆಂಬುದು ಕೇವಲ ಮಗುವಿಗೆ ಕುಟುಂಬ ಒದಗಿಸುವ ಪ್ರಕ್ರಿಯೆಯಲ್ಲ. ಪ್ರೀತಿ, ವಾತ್ಸಲ್ಯ ಮತ್ತು ಮಾನವೀಯತೆಯ ಮೂಲಕ ಮಗುವಿನ ಬದುಕಿಗೆ ಹೊಸ ಭರವಸೆ ನೀಡುವ ಮಹತ್ಕಾರ್ಯವಾಗಿದೆ ಎಂದರು.

ರಕ್ತಸಂಬಂಧಕ್ಕೆ ಹೆಚ್ಚಿನ ಮಹತ್ವ ನೀಡುವ ಸಮಾಜದಲ್ಲಿ ಮಗುವನ್ನು ದತ್ತು ಸ್ವೀಕರಿಸಿ ಕುಟುಂಬದ ಪ್ರೀತಿಯ ಆಸರೆ ನೀಡಲು ಮುಂದಾಗಿರುವ ಪೋಷಕರ ನಿರ್ಧಾರ ಶ್ಲಾಘನೀಯವಾಗಿದೆ. ಮಗು ಉತ್ತಮ ಸಂಸ್ಕಾರ, ಪ್ರೀತಿ ಮತ್ತು ಕಾಳಜಿಯ ವಾತಾವರಣದಲ್ಲಿ ಬೆಳೆದು ದೇಶಕ್ಕೆ ಬೆಳಕಾಗಲಿ ಎಂದು ಹಾರೈಸಿದರು.

ಗದಗ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಆರ್. ಮಾತನಾಡಿ, ಕಳೆದ ತಿಂಗಳೊಂದರಲ್ಲೇ ಎರಡು ನವಜಾತ ಶಿಶುಗಳನ್ನು ರಕ್ಷಿಸಬೇಕಾದ ಪರಿಸ್ಥಿತಿ ಎದುರಾಗಿದ್ದು, ಇಂತಹ ಘಟನೆಗಳು ಸಮಾಜದ ಕಳವಳ ಹೆಚ್ಚಿಸಿವೆ ಎಂದರು.

ಮಗುವನ್ನು ಸಾಕಲು ಸಾಧ್ಯವಾಗದವರು ಅದನ್ನು ಅಪಾಯಕಾರಿ ಸ್ಥಳಗಳಲ್ಲಿ ಬಿಟ್ಟುಹೋಗದೆ, ಮಕ್ಕಳ ರಕ್ಷಣಾ ಇಲಾಖೆಯ ಮೂಲಕ ಕಾನೂನುಬದ್ಧವಾಗಿ ಸುರಕ್ಷಿತವಾಗಿ ಒಪ್ಪಿಸಬೇಕು. ಈ ನಿಟ್ಟಿನಲ್ಲಿ 'ಮಮತೆಯ ತೊಟ್ಟಿಲು' ವ್ಯವಸ್ಥೆಯು ಮಕ್ಕಳ ಜೀವ ಮತ್ತು ಭವಿಷ್ಯದ ರಕ್ಷಣೆಗೆ ಮಹತ್ವದ್ದಾಗಿದೆ. ಮಕ್ಕಳ ರಕ್ಷಣೆಗೆ ನೆರವು ಅಗತ್ಯವಿದ್ದಲ್ಲಿ ಮಕ್ಕಳ ಸಹಾಯವಾಣಿಯನ್ನು ಸಂಪರ್ಕಿಸಬಹುದು ಎಂದು ಮನವಿ ಮಾಡಿದರು.

> ನಾವು ಸಾಮಾನ್ಯವಾಗಿ ಜನ್ಮಕುಂಡಲಿ ಬರೆಯುತ್ತೇವೆ. ಆದರೆ ಸೇವಾಭಾರತಿಯ ಅಮೂಲ್ಯ ವಿಶೇಷ ದತ್ತು ಸ್ವೀಕಾರ ಕೇಂದ್ರವು ಮಕ್ಕಳಿಗೆ ಜೀವನಕುಂಡಲಿಯನ್ನೇ ಬರೆಯುತ್ತಿದೆ. ಅನಾಥ ಮಕ್ಕಳಿಗೆ ಪ್ರೀತಿಯ ಮಡಿಲು, ಭದ್ರ ಭವಿಷ್ಯ ಹಾಗೂ ಬದುಕಿನ ಭರವಸೆ ನೀಡುವುದಕ್ಕಿಂತ ಶ್ರೇಷ್ಠವಾದ ಕಾರ್ಯ ಮತ್ತೊಂದಿಲ್ಲ.
>
> - ಪೂಜ್ಯ ಡಾ. ವೀರಭದ್ರೇಶ್ವರ ಶಿವಾಚಾರ್ಯ ಸ್ವಾಮೀಜಿ

ಬಾಲ್ಯವಿವಾಹ, ಬಾಲಗರ್ಭಧಾರಣೆ ಮತ್ತು ಡಿಜಿಟಲ್ ಸುರಕ್ಷತೆ ಕುರಿತು ಶಾಲಾ-ಕಾಲೇಜುಗಳಲ್ಲಿ ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು. ಮಕ್ಕಳು ಭಯವಿಲ್ಲದೆ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು ಮನೆಯಲ್ಲಿ ಸ್ನೇಹಪರ ವಾತಾವರಣ ಕಲ್ಪಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ದಂಪತಿಗೆ 71ನೇ ಮಗುವನ್ನು ದತ್ತುಪೂರ್ವ ಪೋಷಕತ್ವದಡಿ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಗಣ್ಯ ವ್ಯಾಪಾರಸ್ಥ ಬಲರಾಮಸಾ ಬಸವಾ ಅವರು ಮಗುವಿನ ಭವಿಷ್ಯ ಉತ್ತಮವಾಗಿರಲಿ ಎಂದು ಹಾರೈಸಿ, ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿದರು.

ಸಂಸ್ಥೆಯ ಅಧ್ಯಕ್ಷ ಮಲ್ಲಿಕಾರ್ಜುನ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ರೇಣುಕಾ ಬಸವಾ ಉಪಸ್ಥಿತರಿದ್ದರು. ಉಮಾ ಚನ್ನಪ್ಪನವರ ಪ್ರಾರ್ಥಿಸಿದರು. ನಾಗವೇಣಿ ಕಟ್ಟಿಮನಿ ಸ್ವಾಗತಿಸಿದರು. ಅರುಣ ರಾಜಪುರೋಹಿತ ಪರಿಚಯಿಸಿದರು. ಮಂಜುನಾಥ ಚನ್ನಪ್ಪನವರ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಅನಿತಾ ದೇವದರ ನಿರೂಪಿಸಿದರು. ರಾಜೇಶ ಖಟವಟೆ ವಂದಿಸಿದರು.

ಕಾರ್ಯಕ್ರಮದಲ್ಲಿ ಗುರುಸಿದ್ಧಪ್ಪ ಕೊಣ್ಣೂರ, ಶಿವಕುಮಾರ ಸಣಕಲ್, ಲಿಂಗರಾಜ, ಜಯರಾಜ ಮುಳಗುಂದ, ಬಸವರಾಜ ಪಟ್ಟಣಶೆಟ್ಟಿ, ಈರಣ್ಣ ಢಾಣೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಕೊಡುಗೆ ಅನನ್ಯ

ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ಬಿತ್ತನೆಯಿಂದ ಹಿಡಿದು ಕೊಯ್ಲಿನವರೆಗೆ ಪ್ರತಿಯೊಂದು ಹಂತದಲ್ಲೂ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಕೃಷಿಯಲ್ಲಿ ಶೇ.70ರಿಂದ 80ರಷ್ಟು ಮಹಿಳೆಯರು ನಿರಂತರವಾಗಿ ತೊಡಗಿಸಿಕೊಂಡಿದ್ದು, ಅವರ ಶ್ರಮ ಮತ್ತು ಜವಾಬ್ದಾರಿಯುತ ಸೇವೆಯನ್ನು ಗೌರವಿಸುವ ದೃಷ್ಟಿಯಿಂದ ಮಹಿಳಾ ಕಿಸಾನ್ ದಿನಾಚರಣೆ ಅರ್ಥಪೂರ್ಣವಾಗಿದೆ ಎಂದು ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ಡಾ. ಸುಧಾ ವಿ. ಮಂಕಣಿ ಹೇಳಿದರು.

ಹುಲಕೋಟಿಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅಕ್ಟೋಬರ್ 15ರಂದು ಆಯೋಜಿಸಿದ್ದ ಮಹಿಳಾ ಕಿಸಾನ್ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹುಲಕೋಟಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಾಗರತ್ನಾ ಬಾಳಿಹಳ್ಳಿಮಠ ಕಾರ್ಯಕ್ರಮ ಉದ್ಘಾಟಿಸಿದರು. ಮಹಿಳಾ ಕಿಸಾನ್ ದಿನಾಚರಣೆಯ ಹಿನ್ನೆಲೆ ಮತ್ತು ಮಹತ್ವದ ಕುರಿತು ಡಾ. ಮಂಜುಪ್ರಕಾಶ್ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.



ಕೃಷಿ ವಿಜ್ಞಾನ ಕೇಂದ್ರದಲ್ಲಿ ತರಬೇತಿ ಪಡೆದು, ವಿಜ್ಞಾನಿಗಳ ಮಾರ್ಗದರ್ಶನದೊಂದಿಗೆ ಯಶಸ್ವಿ ಮಹಿಳಾ ಉದ್ಯಮಿಯಾಗಿ ಬೆಳೆದಿರುವ ಗದಗ ತಾಲೂಕಿನ ಬಿಂಕದಕಟ್ಟಿ ಗ್ರಾಮದ ಶ್ಯಾಮಲಾ ಕರೂರ ಅವರು ತಮ್ಮ ಉದ್ಯಮದ ಅನುಭವ ಹಾಗೂ ಕೃಷಿ ವಿಜ್ಞಾನ ಕೇಂದ್ರದಿಂದ ದೊರೆತ ತಾಂತ್ರಿಕ ನೆರವಿನ ಕುರಿತು ಮಾಹಿತಿ ಹಂಚಿಕೊಂಡರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹುಲಕೋಟಿ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ಶಿವಕುಮಾರ ಮಾತನಾಡಿ, ಜನಸಾಮಾನ್ಯರ ಹಸಿವು ನೀಗಿಸುವಲ್ಲಿ ರೈತರು ಹಾಗೂ ರೈತ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು.

ಸಾಧಕ ಮಹಿಳೆಯರಾದ ನಾಗರತ್ನಾ ಬಾಳಿಹಳ್ಳಿಮಠ ಹಾಗೂ ಶ್ಯಾಮಲಾ ಕರೂರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ನಿವೃತ್ತ ವಿಜ್ಞಾನಿ ಎಸ್.ಕೆ. ಮುದ್ಲಾಪುರ, ಕೊರಮಂಡಲ್ ಕಂಪನಿಯ ಬೇಸಾಯ ಶಾಸ್ತ್ರಜ್ಞ ವಿದ್ಯಾಸಾಗರ ಸೇರಿದಂತೆ ಸುಮಾರು 85 ರೈತರು ಮತ್ತು ರೈತ ಮಹಿಳೆಯರು ಉಪಸ್ಥಿತರಿದ್ದರು.

ಡಾ. ಮಂಜುಪ್ರಕಾಶ್ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಎನ್.ಎಚ್. ಭಂಡಿ ಸ್ವಾಗತಿಸಿದರು. ಡಾ. ವಿನಾಯಕ ನಿರಂಜನ್ ವಂದಿಸಿದರು.

# ಕೃಷಿಯೇ ಭಾರತದ ಅಮೂಲ್ಯ ಸಂಪತ್ತು



ವಿಜಯಸಾಕ್ಷಿ ಸುದ್ದಿ, ಗದಗ

ಕೃಷಿಯೇ ಭಾರತದ ಅಮೂಲ್ಯ ಸಂಪತ್ತಾಗಿದ್ದು, ರೈತರು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ತೋಟಗಾರಿಕೆ ಇಲಾಖೆಯ ನಿವೃತ್ತ ಅಧಿಕಾರಿ ಸುರೇಶ ಕುಂಬಾರ ಹೇಳಿದರು.

ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಆಯೋಜಿಸಿದ್ದ ಎನ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ರಾಸಾಯನಿಕ ಗೊಬ್ಬರಗಳ ಬದಲಿಗೆ ಜೈವಿಕ ಹಾಗೂ ಸಾವಯವ ಗೊಬ್ಬರಗಳನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಪ್ರತಿಯೊಬ್ಬ ರೈತ ಕೃಷಿಯಲ್ಲಿ ಯಶಸ್ಸು ಸಾಧಿಸಿದಾಗ ಮಾತ್ರ ಗ್ರಾಮೀಣ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮುಖ್ಯೋಪಾಧ್ಯಾಯಿನಿ ಶಾಂತಾ ಕರಡಿ ಮಾತನಾಡಿ, ಗ್ರಾಮೀಣ ಪ್ರದೇಶದ ಜನರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ಸಂಗತಿ. ವಿದ್ಯಾರ್ಥಿಗಳು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಹೆಚ್ಚು ಸೇವಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ನಂತರ ಕಡಕೋಳದ ಕಿರಣ ಹರ್ಲಾಪೂರ ಅವರಿಂದ ಜಾನಪದ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಪ್ರಭುರಾಜ ಗೂಳರಡ್ಡಿ, ಶಂಕರಗೌಡ ಕಾಶಿಗೌಡ್ರ, ಯಲ್ಲಪ್ಪ ಭೋವಿ, ಕಾಲೇಜಿನ ಪ್ರಾಚಾರ್ಯ ಎಸ್.ಬಿ. ಹಿರೇಮಠ ಹಾಗೂ ಕಾರ್ಯಕ್ರಮ ಅಧಿಕಾರಿ ಜಿ.ಎಸ್. ವೀರಘಂಟಿ ಉಪಸ್ಥಿತರಿದ್ದರು.

# ಶೈಕ್ಷಣಿಕ ಒತ್ತಡ ನಿರ್ವಹಣೆಗೆ ಉಚಿತ ತರಬೇತಿ

ವಿಜಯಸಾಕ್ಷಿ ಸುದ್ದಿ, ಧಾರವಾಡ

ಅಂಜುಮನ್ ಪದವಿ ಮಹಾವಿದ್ಯಾಲಯ ಹಾಗೂ ಸ್ಮೈಲ್ ಫೌಂಡೇಶನ್ ಸಹಯೋಗದಲ್ಲಿ ಪದವಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಒತ್ತಡ ನಿರ್ವಹಣೆ ಮತ್ತು ಮಾನಸಿಕ ಆರೋಗ್ಯ ಜಾಗೃತಿ ಕುರಿತು ಒಂದು ವಾರದ ಉಚಿತ ತರಬೇತಿ ಕಾರ್ಯಕ್ರಮ ಆರಂಭಿಸಲಾಗಿದೆ.

ಸ್ಮೈಲ್ ಫೌಂಡೇಶನ್‌ನ ಆಯುರ್ವೇದ ವೈದ್ಯೆ, ಲೈಫ್ ಕೋಚ್ ಹಾಗೂ ಸಮಗ್ರ ಆರೋಗ್ಯ ಸಲಹೆಗಾರರಾದ ಡಾ. ಅಪರ್ಣಾ ಆರ್. ಶೆಲ್ಕೆ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಯುವಜನರಲ್ಲಿ ಮಾನಸಿಕ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಮೂಡಿಸುವುದು ಹಾಗೂ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸವಾಲುಗಳ ಬಗ್ಗೆ ಅರಿವು ಬೆಳೆಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಮಹಾವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಾ. ಆಸ್ಮನಾಜ್ ಬಳ್ಳಾರಿ ತಿಳಿಸಿದರು.




ಪ್ರಾಚಾರ್ಯ ಡಾ. ಎನ್.ಬಿ. ನಲವತವಾಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸ್ಮೈಲ್ ಫೌಂಡೇಶನ್ ಅಧ್ಯಕ್ಷೆ ರುಖೈಯಾ ತಮಟಗಾರ, ಕರ್ನಾಟಕ ಕಲಾ ಕಾಲೇಜು ಧಾರವಾಡದ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಎಸ್.ಜಿ. ಜಾಧವ್ ಹಾಗೂ ಪ್ರೊ. ಉಲ್ಲಾಸ ಉಪಸ್ಥಿತರಿದ್ದರು.

ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಶಮೀನಾ ಆರ್. ನದಾಫ್ ಕಾರ್ಯಕ್ರಮ ನಿರೂಪಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ನಾಗರಾಜ ಕನಕನೆ ಸ್ವಾಗತಿಸಿದರು. ಡಾ. ಆಸ್ಮಾ ನಧಾಪ್ ವಂದಿಸಿದರು. ಮಹಾವಿದ್ಯಾಲಯದ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

# ಸಂವಿಧಾನಿಕ ಮೌಲ್ಯಗಳ ರಕ್ಷಣೆಗೆ ಮೋಹನ ಲಿಂಬಿಕಾಯಿಗೆ ಬೆಂಬಲಿಸಿ



ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನಿಕ ನೈತಿಕತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವುದು ಕಾಂಗ್ರೆಸ್ ಪಕ್ಷದ ಧ್ಯೇಯವಾಗಿದೆ. ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೋಹನ ಲಿಂಬಿಕಾಯಿ ಸಮರ್ಥ ಅಭ್ಯರ್ಥಿಯಾಗಿದ್ದು, ವಕೀಲರು ಬೆಂಬಲಿಸಬೇಕು ಎಂದು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಮನವಿ ಮಾಡಿದರು.

ಗದಗ ಜಿಲ್ಲಾ ನ್ಯಾಯಾಲಯದ ವಕೀಲರ ಸಂಕೀರ್ಣದಲ್ಲಿ ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಪದವೀಧರರ ಹಿತಾಸಕ್ತಿ ಹಾಗೂ ಸಂವಿಧಾನದ ಆಶಯಗಳ ರಕ್ಷಣೆಗೆ ವಕೀಲರು ಕೈಜೋಡಿಸಬೇಕು ಎಂದರು.

ಅಭ್ಯರ್ಥಿ ಮೋಹನ ಲಿಂಬಿಕಾಯಿ ಮಾತನಾಡಿ, ವಕೀಲರೊಂದಿಗೆ ಹಲವು ವರ್ಷಗಳಿಂದ ನಿಕಟ ಸಂಬಂಧ ಹೊಂದಿದ್ದು, ಗದಗ ಜಿಲ್ಲಾ ನ್ಯಾಯಾಲಯದ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ತಮ್ಮಿಂದಾದ ಸೇವೆ ಸಲ್ಲಿಸಿದ್ದೇನೆ. ಅವಕಾಶ ದೊರೆತರೆ ವಕೀಲರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದರ ಜೊತೆಗೆ ಉತ್ತರ ಕರ್ನಾಟಕದ ಧ್ವನಿಯಾಗಿ ಕೆಲಸ ಮಾಡುತ್ತೇನೆ. ಪದವೀಧರರು ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ವಕೀಲ ಮೋಹನ ಭಜಂತ್ರಿ, ಜಿ.ಕೆ. ಆದಪ್ಪಗೌಡ್ರ ಹಾಗೂ ಮುಕ್ತಾರ ಮೌಲ್ವಿ ಮಾತನಾಡಿ, ಮೋಹನ ಲಿಂಬಿಕಾಯಿ ಅವರಿಗೆ ಬೆಂಬಲ ನೀಡುವಂತೆ ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಆರ್.ಜಿ. ಕಲ್ಲೂರ ವಹಿಸಿದ್ದರು. ಎಂ.ಎ. ಸಂಗನಾಳ, ಶೈಲಾ ಹಿರೇಮಠ ಸೇರಿದಂತೆ ಹಲವು ವಕೀಲರು ಉಪಸ್ಥಿತರಿದ್ದರು.

### ನವರಾತ್ರಿ ಆರಾಧನೆಯೊಂದಿಗೆ ನಿಸರ್ಗದ ಪೋಷಣೆಯೂ ದೇವಿಯ ಆರಾಧನೆ

# ದೇವಿಪುರಾಣದ ತತ್ವ ಅರಿತು ಬದುಕುವುದು ಮುಖ್ಯ

ವಿಜಯಸಾಕ್ಷಿ ಸುದ್ದಿ, ಗದಗ

ನವರಾತ್ರಿ ಸಂದರ್ಭದಲ್ಲಿ ಎಲ್ಲೆಡೆ ಶ್ರೀದೇವಿಯ ಆರಾಧನೆ ನಡೆಯುತ್ತದೆ. ಆದರೆ, ಶ್ರೀಚಿದಾನಂದ ಅವಧೂತರ ದೇವಿಪುರಾಣದಲ್ಲಿನ ನೈಜ ಸಂಗತಿಗಳನ್ನು ಅರಿತು, ಅದರ ತತ್ವಗಳಂತೆ ನಡೆದುಕೊಳ್ಳುವುದು ಅತ್ಯಂತ ಮುಖ್ಯ ಎಂದು ಕಪೋತಗಿರಿ ನಂದಿವೇರಿಮಠದ ಶ್ರೀಶಿವಕುಮಾರ ಮಹಾಸ್ವಾಮಿಗಳು ಹೇಳಿದರು.

ನಗರದ ಅಡವೀಂದ್ರಸ್ವಾಮಿ ಮಠದಲ್ಲಿ 2026ನೇ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ನಡೆದ 46ನೇ ವರ್ಷದ ಶ್ರೀದೇವಿ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಈ ಪರಿಸರವೇ ಅಪೂರ್ವ ಶಕ್ತಿಯ ನೆಲೆಯಾಗಿದೆ. ನಿಸರ್ಗದೇವತೆಯ ಆರಾಧನೆ ಮತ್ತು ಪ್ರಕೃತಿಯ ಪೋಷಣೆಯೂ ಒಂದರ್ಥದಲ್ಲಿ ಶ್ರೀದೇವಿಯ ಆರಾಧನೆಯಾಗಿದೆ. ಇಂದಿನ ಜನರು ಪ್ರಾಪಂಚಿಕ ವ್ಯವಹಾರಗಳಲ್ಲಿ ಮುಳುಗಿ ದೇವರ ಕುರಿತು ಸತ್‌ಚಿಂತನೆ ಮಾಡಲು ಸಮಯ ಮೀಸಲಿಡುತ್ತಿಲ್ಲ. ಹಬ್ಬ-ಹರಿದಿನಗಳು ಹಾಗೂ ಪುರಾಣ ಪ್ರವಚನಗಳ ಮೂಲಕ ದೊರೆಯುವ ಆಧ್ಯಾತ್ಮಿಕ ಸಂದೇಶಗಳನ್ನು ಜನರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.




ಶ್ರೀಮಠದ ಧರ್ಮದರ್ಶಿ ಮಹೇಶ್ವರಸ್ವಾಮೀಜಿ ಸಮ್ಮುಖ ವಹಿಸಿದ್ದರು. ಜಗದೀಶ್ವರಸ್ವಾಮಿಗಳು ಹಿರೇಮಠ ವೇದಿಕೆಯಲ್ಲಿದ್ದರು. ಪಂ. ರಾಜಗುರು ಗುರುಸ್ವಾಮಿ ಕಲಕೇರಿ ಹಾಗೂ ಚನ್ನಬಸಯ್ಯ ಶಾಸ್ತ್ರಿಗಳು ಹೇಮಗಿರಿಮಠ ಅವರು ಶ್ರೀದೇವಿ ಪುರಾಣ ಪ್ರವಚನ ಮತ್ತು ಪಠಣ ನಡೆಸಿಕೊಟ್ಟರು. ಕುಮಾರಿ ಧೃತಿ ಪ್ರವೀಣ ವಾರಕರ ಕಥಕ್ ನೃತ್ಯ ಪ್ರದರ್ಶಿಸಿದರು.

ಪ್ರಸಾದ ಭಕ್ತಿಸೇವೆಯನ್ನು ಶಶಿಧರ ಹಿರೇವಡೆಯರ, ಸಂಜೀವ ಬೇಲೂರ, ಕಮಲಾಕ್ಷಿ ಬೆಳ್ಳಿಕೊಪ್ಪ, ರವಿ ಪೂಜಾರ, ಬಸವರಾಜ ಹಳ್ಳೂರ, ವೈ.ಬಿ. ಮರಿಬಸಣ್ಣನವರ, ಪ್ರವೀಣ ಜೀವಣ್ಣವರ, ಡಾ. ಎಸ್.ಕೆ. ನಲತ್ವಾಡಮಠ ಹಾಗೂ ಶೋಭಾ ದಶವಂತ ವಹಿಸಿದ್ದರು.

ಜಾತ್ರಾಮಹೋತ್ಸವ ಸಮಿತಿ ಅಧ್ಯಕ್ಷ ಸಂತೋಷ ಮಹೇಶಚಂದ್ರ ಕಬಾಡರ, ಪ್ರಕಾಶ ಅಕ್ಕಿ, ವಿನಾಯಕ ಪಾಟೀಲ, ಶಿವಪ್ರಭು ನೀಲಗುಂದ, ಬಸವರಾಜ ಬ್ಯಾಹಟ್ಟಿ, ಕೋಶಾಧ್ಯಕ್ಷ ಪ್ರಭುಗೌಡ ಪಾಟೀಲ, ಮಹಿಳಾ ಘಟಕದ ಅಧ್ಯಕ್ಷೆ ಶಿವಲೀಲಾ ಅಕ್ಕಿ, ಅನ್ನಪೂರ್ಣೇಶ್ವರಿ ಕಬಾಡರ, ಅಶ್ವಿನಿ ನೀಲಗುಂದ, ಅಮೃತಾ ವಾರಕರ, ಶ್ರೀವೇದಾ ಬಿದರೂರ ಹಾಗೂ ನಿರ್ದೇಶಕ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಪ್ರಕಾಶ ಬಂಡಿ ಸ್ವಾಗತಿಸಿದರು. ವೀಣಾ ಸತೀಶಕಾವೇರಿ ವಂದಿಸಿದರು.

> ಶ್ರೀಚಿದಾನಂದ ಅವಧೂತರ ದೇವಿಪುರಾಣದಲ್ಲಿನ ನೈಜ ಸಂಗತಿಗಳನ್ನು ಅರಿತು, ಅದರಂತೆ ನಡೆದುಕೊಳ್ಳುವುದು ತುಂಬಾ ಮುಖ್ಯ. ನಿಸರ್ಗದೇವತೆಯ ಆರಾಧನೆ ಮತ್ತು ಅದರ ಪೋಷಣೆಯೂ ಒಂದರ್ಥದಲ್ಲಿ ಶ್ರೀದೇವಿಯ ಆರಾಧನೆಯಾಗಿದೆ.
>
> -ಶ್ರೀಶಿವಕುಮಾರ ಮಹಾಸ್ವಾಮಿಗಳು,
> ಕಪೋತಗಿರಿ ನಂದಿವೇರಿಮಠ

# ಸಂದೀಪ ಬಿಡಸಾರಿಯಾ ಅವರಿಗೆ ಸನ್ಮಾನ



ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ ಇದರ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಂದೀಪ ಬಿಡಸಾರಿಯಾ ಅವರನ್ನು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷರು ಹಾಗೂ ವಾಣಿಜ್ಯೋದ್ಯಮ ಕ್ಷೇತ್ರದ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಅಶೋಕ ನಿಲೂಗಲ್, ಈಶಣ್ಣ ಮುನವಳ್ಳಿ, ಮಲ್ಲಿಕಾರ್ಜುನ ಸುರಕೋಡ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಎಸ್.ಪಿ. ಸಂಶಿಮಠ ಹಾಗೂ ನರಗುಂದ ವಾಣಿಜ್ಯೋದ್ಯಮ ಸಂಸ್ಥೆ ಮತ್ತು ಕೆಸಿಸಿಐ ಸದಸ್ಯರಾದ ಸಂಗಣ್ಣ ಗೋಹೇಶ್ವರ ಉಪಸ್ಥಿತರಿದ್ದರು.

## ಅ. 27ಕ್ಕೆ ಅಂತಿಮ ಪಟ್ಟಿ ಪ್ರಕಟ, 47,978 ನೋಟಿಸ್‌ಗಳ ವಿತರಣೆ

# ಧಾರವಾಡ ಜಿಲ್ಲೆಯಲ್ಲಿ 13.53 ಲಕ್ಷ ಮತದಾರರು

**ವಿಜಯಸಾಕ್ಷಿ ಸುದ್ದಿ, ಧಾರವಾಡ**

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಧಾರವಾಡ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 13,53,946 ಮತದಾರರು ದಾಖಲಾಗಿದ್ದಾರೆ. ಹಕ್ಕು ಮತ್ತು ಆಕ್ಷೇಪಣೆಗಳ ಪರಿಶೀಲನೆ ಪೂರ್ಣಗೊಳಿಸಿ ಅಕ್ಟೋಬರ್ 27ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಡು ಮತದಾರರ ಪಟ್ಟಿ ಹಾಗೂ ಪರಿಷ್ಕರಣೆ ಕಾರ್ಯದ ಪ್ರಗತಿಯ ಕುರಿತು ಮಾಹಿತಿ ನೀಡಿದರು.

ಜಿಲ್ಲೆಯ ಕರಡು ಪಟ್ಟಿಯಲ್ಲಿ 6,75,857 ಪುರುಷರು, 6,78,023 ಮಹಿಳೆಯರು ಹಾಗೂ 66 ಇತರೆ ಮತದಾರರಿದ್ದಾರೆ. ಪುರುಷರಿಗಿಂತ ಮಹಿಳಾ ಮತದಾರರ ಸಂಖ್ಯೆ 2,166ರಷ್ಟು ಹೆಚ್ಚಿದೆ.



ಕ್ಷೇತ್ರವಾರು ವಿವರದಂತೆ ನವಲಗುಂದದಲ್ಲಿ 1,93,334, ಕುಂದಗೋಳದಲ್ಲಿ 1,77,425, ಧಾರವಾಡದಲ್ಲಿ 1,93,578, ಹುಬ್ಬಳ್ಳಿ-ಧಾರವಾಡ ಪೂರ್ವದಲ್ಲಿ 1,81,334, ಸೆಂಟ್ರಲ್‌ನಲ್ಲಿ 2,04,314, ಪಶ್ಚಿಮದಲ್ಲಿ 2,17,195 ಹಾಗೂ ಕಲಘಟಗಿಯಲ್ಲಿ 1,86,766 ಮತದಾರರಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 1,707 ಮತಗಟ್ಟೆಗಳನ್ನು ಗುರುತಿಸಲಾಗಿದೆ.

ಜೂನ್ 16ರಿಂದ ಅಕ್ಟೋಬರ್ 14ರವರೆಗೆ ಹೊಸ ಮತದಾರರ ನೋಂದಣಿ, ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಇತರ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಒಟ್ಟು 70,844 ಅರ್ಜಿಗಳು ಸ್ವೀಕೃತವಾಗಿವೆ. ಇವುಗಳಲ್ಲಿ ನಮೂನೆ-6ಕ್ಕೆ 26,872, ನಮೂನೆ-6ಎಗೆ 76, ನಮೂನೆ-7ಕ್ಕೆ 4,376 ಹಾಗೂ ನಮೂನೆ-8ಕ್ಕೆ 39,520 ಅರ್ಜಿಗಳು ಸಲ್ಲಿಕೆಯಾಗಿವೆ.

> ಮತದಾರರು ತಮ್ಮ ಹೆಸರು, ವಿಳಾಸ ಸೇರಿದಂತೆ ಪಟ್ಟಿಯಲ್ಲಿರುವ ವಿವರಗಳನ್ನು ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಬೇಕು. ಹೆಸರು ಸೇರ್ಪಡೆ, ತಿದ್ದುಪಡಿ ಅಥವಾ ಆಕ್ಷೇಪಣೆ ಸಲ್ಲಿಸುವ ಅಗತ್ಯವಿದ್ದರೆ ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳನ್ನು ಸಂಪರ್ಕಿಸಬೇಕು.
>
> – ಗೀತಾ ಸಿ.ಡಿ., ಅಪರ ಜಿಲ್ಲಾಧಿಕಾರಿ

ಜಿಲ್ಲೆಯಲ್ಲಿ 18ರಿಂದ 19 ವರ್ಷದೊಳಗಿನ 14,316 ಯುವ ಮತದಾರರಿದ್ದಾರೆ. ಇವರಲ್ಲಿ 7,868 ಪುರುಷರು ಹಾಗೂ 6,448 ಮಹಿಳೆಯರಿದ್ದಾರೆ. ಯುವ ಮತದಾರರು ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

ಕರಡು ಪಟ್ಟಿ ಪ್ರಕಟವಾದ ಬಳಿಕ ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಅಕ್ಟೋಬರ್ 16ರವರೆಗಿನ ವರದಿಯಂತೆ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 47,978 ನೋಟಿಸ್‌ಗಳನ್ನು ಸಿದ್ಧಪಡಿಸಿ ವಿತರಿಸಲಾಗಿದೆ. ನೋಟಿಸ್ ತಲುಪಿಸುವುದು ಹಾಗೂ ವಿಚಾರಣೆ ನಡೆಸುವ ಪ್ರಕ್ರಿಯೆ ಮುಂದುವರಿದಿದೆ. ಹಕ್ಕು ಮತ್ತು ಆಕ್ಷೇಪಣೆಗಳ ಪರಿಶೀಲನೆ ಹಾಗೂ ವಿಲೇವಾರಿಗೆ ಅಕ್ಟೋಬರ್ 22 ಕೊನೆಯ ದಿನವಾಗಿದೆ.

ಪತ್ರಿಕಾಗೋಷ್ಠಿಯ ಬಳಿಕ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಯಿತು. ಉಪವಿಭಾಗಾಧಿಕಾರಿ ಪ್ರಭಾವತಿ ಫಕೀರಪುರ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಮತದಾರರ ನೋಂದಣಾಧಿಕಾರಿಗಳು ಹಾಗೂ ರಾಜಕೀಯ ಮುಖಂಡರು ಉಪಸ್ಥಿತರಿದ್ದರು.

# ನವರಾತ್ರಿ ಸಂಭ್ರಮಕ್ಕೆ ದಾಂಡಿಯಾ ನೃತ್ಯದ ಮೆರುಗು



**ವಿಜಯಸಾಕ್ಷಿ ಸುದ್ದಿ, ಗದಗ**

ಇನ್ನರ್ ವೀಲ್ ಕ್ಲಬ್ ಗದಗ-ಬೆಟಗೇರಿ ವತಿಯಿಂದ ನವರಾತ್ರಿ ಹಬ್ಬದ ಅಂಗವಾಗಿ ನಗರದ ರೋಟರಿ ಐ ಕೇರ್ ಸೆಂಟರ್‌ನಲ್ಲಿ ಮಾಸಿಕ ಸಭೆ ಹಾಗೂ ದಾಂಡಿಯಾ ನೃತ್ಯ ಕಾರ್ಯಕ್ರಮವನ್ನು ದೇವಿ ಆರಾಧನೆಯೊಂದಿಗೆ ಸಂಭ್ರಮದಿಂದ ಆಚರಿಸಲಾಯಿತು.

ನವರಾತ್ರಿ ಹಬ್ಬದ ಸಾಂಸ್ಕೃತಿಕ ವೈಭವವನ್ನು ಬಿಂಬಿಸಿದ ಕಾರ್ಯಕ್ರಮದಲ್ಲಿ ಕ್ಲಬ್‌ನ ಸದಸ್ಯೆಯರು ಸಾಂಪ್ರದಾಯಿಕ ಉಡುಗೆ ತೊಟ್ಟು ಉತ್ಸಾಹದಿಂದ ಪಾಲ್ಗೊಂಡರು. ದಾಂಡಿಯಾ ನೃತ್ಯದ ಮೂಲಕ ಹಬ್ಬದ ಸಂಭ್ರಮ ಹಂಚಿಕೊಂಡರು. ವಿವಿಧ ಮನರಂಜನಾ ಆಟಗಳಲ್ಲಿ ಭಾಗವಹಿಸಿದ ಸದಸ್ಯೆಯರಿಗೆ ಬಹುಮಾನ ವಿತರಿಸಲಾಯಿತು. ಈ ಕಾರ್ಯಕ್ರಮ ಸದಸ್ಯೆಯರ ನಡುವಿನ ಸ್ನೇಹ, ಸೌಹಾರ್ದತೆ ಹಾಗೂ ಪರಸ್ಪರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿತು.

ಈ ಸಂದರ್ಭದಲ್ಲಿ ಪಿಡಿಸಿ ಪ್ರೇಮಾ ಗುಳಗೌಡರ ಅವರು ಮಾರ್ಗದರ್ಶನದ ಮಾತುಗಳ ಮೂಲಕ ಸದಸ್ಯೆಯರನ್ನು ಪ್ರೋತ್ಸಾಹಿಸಿದರು. ಇನ್ನರ್ ವೀಲ್ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಸದಸ್ಯೆಯರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವ ಅಗತ್ಯವನ್ನು ಒತ್ತಿಹೇಳಿದರು.

ಕ್ಲಬ್ ಅಧ್ಯಕ್ಷೆ ಮಂಜುಳಾ ಅಕ್ಕಿ ಮಾತನಾಡಿ, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಸದಸ್ಯೆಯರಲ್ಲಿ ಒಗ್ಗಟ್ಟು, ಸ್ನೇಹಭಾವ ಮತ್ತು ಸಂತೋಷವನ್ನು ಹೆಚ್ಚಿಸುವುದರ ಜತೆಗೆ ಪರಸ್ಪರ ಸಹಕಾರ ಹಾಗೂ ಆತ್ಮೀಯತೆಯನ್ನು ಬೆಳೆಸುತ್ತವೆ. ಹಬ್ಬಗಳ ಆಚರಣೆಯ ಮೂಲಕ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಉಳಿಸಿ ಬೆಳೆಸುವುದರೊಂದಿಗೆ ಸದಸ್ಯೆಯರ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಾಸಿಕ ಸಭೆಯಲ್ಲಿ ಕ್ಲಬ್‌ನ ಮುಂದಿನ ಚಟುವಟಿಕೆಗಳು ಹಾಗೂ ಸೇವಾ ಕಾರ್ಯಗಳ ಕುರಿತು ಚರ್ಚಿಸಲಾಯಿತು. ಸಾಮಾಜಿಕ ಸೇವೆಯ ಜತೆಗೆ ಸದಸ್ಯೆಯರ ಪ್ರತಿಭೆ, ಸೃಜನಶೀಲತೆ ಮತ್ತು ಪರಸ್ಪರ ಸಹಕಾರಕ್ಕೆ ಉತ್ತೇಜನ ನೀಡುವ ಇಂತಹ ಕಾರ್ಯಕ್ರಮಗಳನ್ನು ಮುಂದುವರಿಸುವ ಸಂಕಲ್ಪ ವ್ಯಕ್ತಪಡಿಸಲಾಯಿತು.

ಮಾಸಿಕ ಸಭೆಯ ಇನ್ನರ್ ವೀಲ್ ಪ್ರಾರ್ಥನೆಯನ್ನು ಪುಷ್ಪಾ ಭಂಡಾರಿ ಮತ್ತು ಸುಲೋಚನಾ ಐಹೊಳ್ಳಿ ನೆರವೇರಿಸಿದರು. ಕಾರ್ಯಕ್ರಮವನ್ನು ಕ್ಲಬ್ ಕಾರ್ಯದರ್ಶಿ ಪೂಜಾ ಭೂಮಾ ನಿರೂಪಿಸಿದರು. ಕ್ಲಬ್‌ನ ಪದಾಧಿಕಾರಿಗಳು ಹಾಗೂ ಸದಸ್ಯೆಯರು ಪಾಲ್ಗೊಂಡಿದ್ದರು.

# ಓವರ್‌ಲೋಡ್ ಟಿಪ್ಪರ್‌ಗಳ ಹಾವಳಿ

## ಪೈಪ್‌ಲೈನ್ ಒಡೆದು ನೀರು ಪೋಲು



**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪಟ್ಟಣದ ಪೊಲೀಸ್ ಠಾಣೆ ಸಮೀಪದ ಕೈಗಾ-ಇಲಕಲ್ಲ ರಾಜ್ಯ ಹೆದ್ದಾರಿಯಲ್ಲಿ ಅಕ್ರಮವಾಗಿ ಗರಸು ಸಾಗಿಸುತ್ತಿವೆ ಎನ್ನಲಾದ ಓವರ್‌ಲೋಡ್ ಟಿಪ್ಪರ್‌ಗಳ ಸಂಚಾರದಿಂದ ಕುಡಿಯುವ ನೀರಿನ ಪೈಪ್‌ಲೈನ್ ಹಾನಿಗೊಳಗಾಗಿ ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ. ಭಾರೀ ವಾಹನಗಳ ಸಂಚಾರದಿಂದ ಮುಖ್ಯ ರಸ್ತೆಯೂ ಹದಗೆಟ್ಟಿದ್ದು, ಸಾರ್ವಜನಿಕರು ಹಾಗೂ ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ.

ಈ ರಸ್ತೆಯಲ್ಲಿ ಪೈಪ್‌ಲೈನ್ ಈಗಾಗಲೇ ಎರಡು ಬಾರಿ ಹಾನಿಗೊಳಗಾಗಿದ್ದು, ಪಟ್ಟಣ ಪಂಚಾಯಿತಿ ಸಿಬ್ಬಂದಿ ದುರಸ್ತಿ ಕಾರ್ಯ ಕೈಗೊಂಡಿದ್ದರು. ಆದರೆ, ಮತ್ತೆ ಪೈಪ್‌ಲೈನ್ ಒಡೆದಿರುವುದರಿಂದ ರಸ್ತೆಯಲ್ಲಿ ನೀರು ಹರಿದು ಸಂಗ್ರಹವಾಗುತ್ತಿದೆ. ಇದರಿಂದ ಕುಡಿಯುವ ನೀರು ವ್ಯರ್ಥವಾಗುವುದರ ಜೊತೆಗೆ ರಸ್ತೆ ಸಂಚಾರಕ್ಕೂ ಅಡಚಣೆಯಾಗಿದೆ.

ಪೊಲೀಸ್ ಠಾಣೆ ಸಮೀಪವೇ ಭಾರೀ ವಾಹನಗಳ ಸಂಚಾರ ದಿಂದ ಇಂತಹ ಸಮಸ್ಯೆ ಮರುಕಳಿಸುತ್ತಿರುವುದು ಸಾರ್ವಜನಿಕರ ಗಮನ ಸೆಳೆದಿದೆ. ರಸ್ತೆಯ ದುಸ್ಥಿತಿಯಿಂದ ಅಪಘಾತದ ಆತಂಕವೂ ಎದುರಾಗಿದೆ.

ಗರಸು ಸಾಗಾಟಕ್ಕೆ ಸಂಬಂಧಿಸಿದ ನಿಯಮಗಳ ಪಾಲನೆ ಹಾಗೂ ವಾಹನಗಳ ಭಾರಮಿತಿಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪೈಪ್‌ಲೈನ್ ಹಾನಿಗೆ ಕಾರಣವಾಗಿರುವ ವಾಹನಗಳ ಸಂಚಾರದ ಕುರಿತು ಪರಿಶೀಲಿಸಿ, ಅಕ್ರಮ ಸಾಗಾಟ ಅಥವಾ ಓವರ್‌ಲೋಡ್ ಸಂಚಾರ ದೃಢಪಟ್ಟಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು.ಹಾನಿಗೊಳಗಾದ ಪೈಪ್ ಲೈನ್ ದುರಸ್ತಿಗೊಳಿಸಿ, ರಸ್ತೆಯನ್ನು ಸರಿಪಡಿಸುವ ಮೂಲಕ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ಸಾಮಾಜಿಕ ಹೋರಾಟಗಾರ ಅಶೋಕ ಬೇವಿನಕಟ್ಟಿ ಮನವಿ ಮಾಡಿದ್ದಾರೆ.

# ಪ್ರಹ್ಲಾದ ಜೋಶಿಗೆ ಕಂಬಳಿ ಹೊದಿಸಿ ಸನ್ಮಾನ



**ವಿಜಯಸಾಕ್ಷಿ ಸುದ್ದಿ, ಗದಗ**

ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರಕ್ಕಾಗಿ ಗದಗ ನಗರಕ್ಕೆ ಆಗಮಿಸಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರನ್ನು ಬಿಜೆಪಿ ಗದಗ ಜಿಲ್ಲಾ ಪ್ರಕೋಷ್ಠಗಳ ಸಹ ಸಂಯೋಜಕ ರಮೇಶ ಎನ್. ಸಜ್ಜಗಾರ ನೇತೃತ್ವದಲ್ಲಿ ಕಂಬಳಿ ಹೊದಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಹಾಗೂ ನರಗುಂದ ಶಾಸಕ ಸಿ.ಸಿ. ಪಾಟೀಲ, ಹುಬ್ಬಳ್ಳಿ ಸೆಂಟ್ರಲ್ ಶಾಸಕ ಮಹೇಶ ತೆಂಗಿನಕಾಯಿ, ಪಶ್ಚಿಮ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ, ಬಿಜೆಪಿ ಗದಗ ಮತಕ್ಷೇತ್ರದ ಮುಖಂಡ ಅನಿಲ ಮೆಣಸಿನಕಾಯಿ, ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಣ್ಣ ಕುರುಡಗಿ, ಮಾಜಿ ಜಿಲ್ಲಾಧ್ಯಕ್ಷ ಮೋಹನ ಮಾಳಶೆಟ್ಟಿ, ರವಿಕಾಂತ ಅಂಗಡಿ, ಶಿವು ಡಂಬಳ, ಡಾ. ಪುನೀತ್ ಬೆನಕನವಾರಿ, ಹನಮಂತ ಹಳ್ಳೂರ, ಅರುಣಕುಮಾರ ಕಂಕರಿ, ಬಾಲು ಜಗ್ಗಲ್, ಮಂಜುನಾಥ ಕುರ್ತಕೋಟಿ, ಯಲ್ಲಪ್ಪ ಜೋಗಿನ, ಮಂಜುನಾಥ ಜೋಗಿನ, ಆನಂದ ಹಂಡಿ, ಕೇಂದ್ರ ಆಹಾರ ನಿಗಮದ ರಾಜ್ಯ ನಿರ್ದೇಶಕ ರವಿ ದಂಡಿನ, ಮಾಜಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿದ್ದಣ್ಣ ಪಲ್ಲೇದ, ಮಾಜಿ ನಿಗಮ ಮಂಡಳಿ ಅಧ್ಯಕ್ಷ ಎಂ.ಎಸ್. ಕರಿಗೌಡ್ರು, ಭೀಮಸಿಂಗ ರಾಠೋಡ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಸುರೇಶ ಮರಳಪ್ಪನವರ್, ಅರವಿಂದ ಹುಲ್ಲೂರ, ನಿವೃತ್ತ ಶಿಕ್ಷಕ ಚಂದ್ರಶೇಖರ ಜೋರಗಸ್ತಿ, ಗುಡದಪ್ಪ ಹಂಚಿನಾಳ, ಆನಂದ ಬೋಸಗಿ, ಮಂಜುನಾಥ ಶಾಂತಗೇರಿ, ರವಿ ಮಾನ್ವಿ, ಹುಚ್ಚಪ್ಪ ಸಂದಕದ, ಚಿಂಚಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮುತ್ತಪ್ಪ ಸಂದಕದ, ಮಂಜುನಾಥ ಹಳ್ಳೂರಮಠ ಹಾಗೂ ನಾಗರಾಜ ಕುಲಕರ್ಣಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಅ. 20ರಂದು ಶರಣಬಸವೇಶ್ವರ ಪುರಾಣ ಮಂಗಲೋತ್ಸವ

**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಹೊಸಪೇಟೆ, ಬಳ್ಳಾರಿ ಹಾಗೂ ಹಂಪಿ ಹೇಮಕೂಟ ಸಿಂಹಾಸನಾಧೀಶ್ವರ ಜಗದ್ಗುರು ಮುಪ್ಪಿನ ಬಸವಲಿಂಗ ಸ್ವಾಮೀಜಿಯವರ ಅಪ್ಪಣೆಯ ಮೇರೆಗೆ, ಭಾದ್ರಪದ ಮಾಸದ ಸೆ. 23ರಂದು ಜಕ್ಕಲಿಯಲ್ಲಿ ಆರಂಭಗೊಂಡ ಮಹಾದಾಸೋಹಿ ಕಲಬುರಗಿ ಶರಣಬಸವೇಶ್ವರ ಪುರಾಣ ಪ್ರವಚನವು ಅ. 20ರಂದು ಮಂಗಲಗೊಳ್ಳಲಿದೆ. ಇದರ ಅಂಗವಾಗಿ ಗುರು ಅನ್ನದಾನೇಶ್ವರ ಜಾತ್ರಾ ಮಹೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಅಂದು ಬೆಳಗ್ಗೆ 6 ಗಂಟೆಗೆ ಶ್ರೀ ಕುಂಭೇಶ್ವರ ಲಿಂಗಕ್ಕೆ ಮಹಾರುದ್ರಾಭಿಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ ನೆರವೇರಲಿದೆ. ಬೆಳಗ್ಗೆ 8 ಗಂಟೆಗೆ ಜಂಗಮೋತ್ಸವದ ಅಂಗವಾಗಿ ಸುಕ್ಷೇತ್ರ ಅಡವಿ ಅಮರೇಶದ ತೋಂಟದಾರ್ಯ ಸ್ವಾಮೀಜಿಯವರ ಅಡ್ಡಪಲ್ಲಕ್ಕಿ ಉತ್ಸವವು ಹೂವಿನಿಂದ ಅಲಂಕೃತಗೊಂಡು ಶ್ರೀಮಠದಿಂದ ಹೊರಡಲಿದೆ.

ನರೇಗಲ್ಲ-ಕೋಡಿಕೊಪ್ಪದ ಪುರವಂತರು, ವಿವಿಧ ಭಜನಾ ಮೇಳಗಳು, ಕರಡಿ ಮಜಲು, ಡೊಳ್ಳು ಕುಣಿತ ಹಾಗೂ ಸುಮಂಗಲಿಯರ ಆರತಿಯೊಂದಿಗೆ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಮಹಾಶಿವಶರಣರಾದ ಅಣ್ಣಯ್ಯ-ತಮ್ಮಯ್ಯನವರ ಪುಣ್ಯತಾಣ ತಲುಪಲಿದೆ. ಅಲ್ಲಿ ಪಾದಪೂಜೆ ನೆರವೇರಿಸಿದ ಬಳಿಕ ಉತ್ಸವವು ಮರಳಿ ಮಠಕ್ಕೆ ಆಗಮಿಸಲಿದೆ. ಮಧ್ಯಾಹ್ನ 1 ಗಂಟೆಗೆ ಮಹಾಗಣಾರಾಧನೆ ಹಾಗೂ ಸಂಜೆ 7 ಗಂಟೆಗೆ ಧರ್ಮಸಭೆ ನಡೆಯಲಿದೆ.

ಹಾಲಕೆರೆ ಶ್ರೀಮಠದ ಪೀಠಾಧಿಪತಿ ಜಗದ್ಗುರು ಮುಪ್ಪಿನ ಬಸವಲಿಂಗ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ, ನಿಡಗುಂದಿಕೊಪ್ಪ ಶಾಖಾ ಶಿವಯೋಗಮಂದಿರದ ಅಭಿನವ ಚನ್ನಬಸವ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಧರ್ಮಸಭೆ ಜರುಗಲಿದೆ.

ಸುಕ್ಷೇತ್ರ ಅಡವಿ ಅಮರೇಶದ ತೋಂಟದಾರ್ಯ ಸ್ವಾಮೀಜಿ, ಜೀಗೇರಿಯ ಷ.ಬ್ರ. ಗುರುಸಿದ್ಧ ಶಿವಾಚಾರ್ಯ ಸ್ವಾಮೀಜಿ, ಬನವಾಸಿಯ ಶಿವಲಿಂಗ ದೇಶಿಕರು ಸೇರಿದಂತೆ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ. ಸೊರಟೂರಿನ ಶಿಕ್ಷಕ ಹಾಗೂ ಸಾಹಿತಿ ಶರಣು ಕಲಾಲ ಉಪನ್ಯಾಸ ನೀಡಲಿದ್ದಾರೆ.

# ಲಲಿತರಾಣಿ ಶ್ರೀರಂಗದೇವರಾಯಲುಗೆ ಗಣ್ಯರಿಂದ ಗೌರವಾಭಿನಂದನೆ

**ವಿಜಯಸಾಕ್ಷಿ ಸುದ್ದಿ, ಗದಗ**

ಆನೆಗೊಂದಿಯ ರಾಜವಂಶಸ್ಥೆ ಲಲಿತರಾಣಿ ಶ್ರೀರಂಗದೇವರಾಯಲು ಅವರ 75ನೇ ಜನ್ಮದಿನದ ಅಂಗವಾಗಿ ಆನೆಗೊಂದಿಯ ಆದಿಶಕ್ತಿ ದೇವಸ್ಥಾನದಲ್ಲಿ ತುಲಾಭಾರ ಕಾರ್ಯಕ್ರಮ ಧಾರ್ಮಿಕ ವಿಧಿವಿಧಾನಗಳೊಂದಿಗೆ ಜರುಗಿತು. ದಾಸೋಹರತ್ನ ಬ್ರಹ್ಮಾನಂದ ಗುರುಗಳ ಆಶೀರ್ವಾದದೊಂದಿಗೆ ಲೋಕಕಲ್ಯಾಣಾರ್ಥವಾಗಿ ವಿಶೇಷ ಪೂಜೆ ಸಲ್ಲಿಸಿ ಕಾರ್ಯಕ್ರಮ ನೆರವೇರಿಸಲಾಯಿತು.

ಬಳ್ಳಾರಿ, ವಿಜಯನಗರ, ಕೊಪ್ಪಳ ಹಾಗೂ ಹೊಸಪೇಟೆ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಜನರು ಲಲಿತರಾಣಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಈ ಸಂದರ್ಭದಲ್ಲಿ ಮಾತನಾಡಿದ ಲಲಿತರಾಣಿ ಶ್ರೀರಂಗದೇವರಾಯಲು, ಬಳ್ಳಾರಿ, ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಗಳ ಜನರು ತಮ್ಮ ಕುಟುಂಬದ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದದಿಂದ ಕ್ಷೇತ್ರದ ಅಭಿವೃದ್ಧಿ ಹಾಗೂ ಜನಕಲ್ಯಾಣ ಕಾರ್ಯಗಳನ್ನು ಕೈಗೊಳ್ಳಲು ಪ್ರೇರಣೆ ದೊರೆತಿದೆ. ಜನರು ತೋರಿದ ಪ್ರೀತಿ ಮತ್ತು ಅಭಿಮಾನವನ್ನು ಎಂದಿಗೂ ಮರೆಯುವುದಿಲ್ಲ ಎಂದರು.

ಗದಗ ಜಿಲ್ಲಾ ವಿಕಾಸ ವೇದಿಕೆ ಅಧ್ಯಕ್ಷ ವಿಶ್ವನಾಥ ಖಾನಾಪೂರ ಮಾತನಾಡಿ, 75ನೇ ವಯಸ್ಸಿನಲ್ಲಿಯೂ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಲಲಿತರಾಣಿ ಅವರಿಗೆ ಹಂಪಿಯ ಶ್ರೀ ವಿರೂಪಾಕ್ಷ ದೇವರು, ತಾಯಿ ಭುವನೇಶ್ವರಿ, ಪಂಪಾದೇವಿ ಹಾಗೂ ದುರ್ಗಾದೇವಿ ಇನ್ನಷ್ಟು ಶಕ್ತಿ ಮತ್ತು ಆರೋಗ್ಯ ನೀಡಲಿ ಎಂದು ಪ್ರಾರ್ಥಿಸಿ ಶುಭ ಹಾರೈಸಿದರು.

ಶ್ರೀ ವಿಷ್ಣುತೀರ್ಥ ಜೋಶಿ ಮಾತನಾಡಿ, ಲಲಿತರಾಣಿ ಅವರು ತಮ್ಮ ಮನೆಗೆ ಬರುವ ಪ್ರತಿಯೊಬ್ಬರ ಕಷ್ಟ-ಸುಖಗಳನ್ನು ಆತ್ಮೀಯವಾಗಿ ಆಲಿಸಿ, ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಾಸೋಹರತ್ನ ಶ್ರೀಶ್ರೀಶ್ರೀ ಬ್ರಹ್ಮಾನಂದ ಗುರುಗಳು ಲಲಿತರಾಣಿ ಶ್ರೀರಂಗದೇವರಾಯಲು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಆಶೀರ್ವಚನ ನೀಡಿದರು. ಶ್ರೀ ರಾಜ ನರಸಿಂಹದೇವರಾಯರು, ಡಾ. ರಾಯಲರಾಜ ಶ್ರೀಕೃಷ್ಣದೇವರಾಯಲು, ಡಾ. ವೆಂಕಟೇಶ ಬಾಬು, ಹೊನ್ನಪ್ಪ ನಾಯಕ, ಬಾಳೆಕಾಯಿ ತಿಮ್ಮಪ್ಪ, ಕೆ. ವರಲಕ್ಷ್ಮೀ, ಕೆ. ಪವನಕುಮಾರ, ವೆಂಕಟೇಶ ಕೆ. ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಹೊರಗುತ್ತಿಗೆ ನೌಕರರಿಗೆ ₹36 ಸಾವಿರ ಕನಿಷ್ಠ ವೇತನ ಜಾರಿಗೊಳಿಸಿ

**ವಿಜಯಸಾಕ್ಷಿ ಸುದ್ದಿ, ಗದಗ**

ಸರ್ಕಾರಿ ಹಾಸ್ಟೆಲ್‌ಗಳು ಮತ್ತು ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಮಾಸಿಕ ₹36 ಸಾವಿರ ಕನಿಷ್ಠ ವೇತನ ನೀಡುವುದು, ಖಾಯಂ ನೇಮಕಾತಿ ಹಾಗೂ ಸೇವಾ ಭದ್ರತೆ ಒದಗಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಗದಗ ಜಿಲ್ಲಾ ಸಮಿತಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿತು.




ಸಂಘದ ರಾಜ್ಯಾಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ ಮಾತನಾಡಿ, 15ರಿಂದ 20 ವರ್ಷಗಳಿಂದ ಕಡಿಮೆ ವೇತನಕ್ಕೆ ದುಡಿಯುತ್ತಿರುವ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾಗಾರರು, ಕಾವಲುಗಾರರು ಹಾಗೂ ಇತರ ಸಿಬ್ಬಂದಿಗೆ ಕೆಲಸದ ಭದ್ರತೆ ಇಲ್ಲ. ಕೆಲವರನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಲಾಗುತ್ತಿದ್ದು, ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ರಾಜ್ಯ ಜಂಟಿ ಕಾರ್ಯದರ್ಶಿ ಹುಲುಗಪ್ಪ ಚಲವಾದಿ ಮಾತನಾಡಿ, 2026ರ ಮೇ 22ರಂದು ಹೊರಡಿಸಿರುವ ಪರಿಷ್ಕೃತ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ತಕ್ಷಣ ಜಾರಿಗೊಳಿಸಬೇಕು.

ವೇತನವನ್ನು ನೇರವಾಗಿ ಇಲಾಖೆಯಿಂದ ಪಾವತಿಸಬೇಕು. ಬಾಕಿ ಸಂಬಳ ಬಿಡುಗಡೆ, ವಾರದ ರಜೆ, ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಹಾಗೂ ಅಪಘಾತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಸಿಬ್ಬಂದಿ ಕಡಿತ ಆದೇಶ ರದ್ದು, ಖಾಲಿ ಹುದ್ದೆಗಳಿಗೆ ನೇಮಕಾತಿ, ಕೆಲಸ ಕಳೆದುಕೊಂಡವರ ಮರುನೇಮಕ, ಮಹಿಳಾ ನೌಕರರಿಗೆ ಋತುಚಕ್ರದ ರಜೆ ಮತ್ತು ವೇತನ ಸಹಿತ ಹೆರಿಗೆ ರಜೆ, ನಿವೃತ್ತಿ ನಂತರ ₹10 ಲಕ್ಷ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟರು.

ಕೃಷಿ ಕೂಲಿಕಾರ ಸಂಘದ ಜಿಲ್ಲಾ ಮುಖಂಡ ಬಾಲು ರಾಠೋಡ ಮಾತನಾಡಿ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಲಕ್ಷ್ಮೇಶ್ವರ ಮತ್ತು ಮುಂಡರಗಿಯ ವಸತಿ ನಿಲಯಗಳು ಹಾಗೂ ಶಿರಹಟ್ಟಿಯ ವಸತಿ ಶಾಲೆಯಲ್ಲಿ ಕೆಲಸದಿಂದ ತೆಗೆದುಹಾಕಿರುವ ಸಿಬ್ಬಂದಿಯನ್ನು ಮರುನೇಮಕ ಮಾಡಬೇಕು. ಸಿಬ್ಬಂದಿಗೆ ಕಿರುಕುಳ ನೀಡಿದ ಆರೋಪಗಳ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಹಾಂತೇಶ ಶಿರಸೂರ, ರಾಮಚಂದ್ರ ಕಡೆಮನಿ, ಮಹ್ಮದಸಾಬ ಕರ್ನಾಚಿ, ಬಸವರಾಜ ಪೂಜಾರಿ, ಮಹಾಂತೇಶ ಅಂಗಡಿ, ಮಂಜುನಾಥ ವಡ್ಡರ ಸೇರಿದಂತೆ ಸಂಘದ ಹಲವು ಪದಾಧಿಕಾರಿಗಳು ಹಾಗೂ ನೌಕರರು ಉಪಸ್ಥಿತರಿದ್ದರು.

# ದುಷ್ಟ ಶಕ್ತಿಗಳ ನಿರ್ನಾಮಕ್ಕೆ ದೇವಿ ಪುರಾಣ ಶ್ರವಣ ಅಗತ್ಯ

**ವಿಜಯಸಾಕ್ಷಿ ಸುದ್ದಿ, ಮುಳಗುಂದ**

ದೇವಿ ಪುರಾಣದ ಪ್ರವಚನ ಆಲಿಸುವುದರಿಂದ ನಮ್ಮಲ್ಲಿರುವ ದುಷ್ಟ ಶಕ್ತಿಗಳು ನಾಶವಾಗಿ, ಶಿಷ್ಟ ಶಕ್ತಿಗಳು ಜಾಗೃತಗೊಳ್ಳುತ್ತವೆ. ಹೀಗಾಗಿ ದೇವಿ ಪುರಾಣವನ್ನು ಶ್ರದ್ಧಾಭಕ್ತಿಯಿಂದ ಆಲಿಸಬೇಕು ಎಂದು ಶೇಖಪ್ಪ ಹಡಪದ ಹೇಳಿದರು. ಸಮೀಪದ ಸೊರಟೂರ ಗ್ರಾಮದ ದ್ಯಾಮವ್ವದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಅಂಗವಾಗಿ ನಡೆಯುತ್ತಿರುವ ದೇವಿ ಪುರಾಣ ಪ್ರವಚನದಲ್ಲಿ ಮಾತನಾಡಿದ ಅವರು, ಒಂಬತ್ತು ದಿನಗಳ ದಸರಾ ಹಬ್ಬದ ಸಂದರ್ಭದಲ್ಲಿ ದೇವಿ ಪುರಾಣ ಆಲಿಸುವುದರಿಂದ ಮನಸ್ಸಿನಲ್ಲಿ ಸಾತ್ವಿಕ ಭಾವನೆಗಳು ಬೆಳೆಯುತ್ತವೆ. ನಮ್ಮಲ್ಲಿರುವ ದುಷ್ಟ ಗುಣಗಳು ದೂರವಾಗಿ, ಒಳ್ಳೆಯ ಗುಣಗಳು ಮೈಗೂಡುತ್ತವೆ ಎಂದರು.



ಪುರಾಣ ಪಠಣವನ್ನು ಕುಮಾರಸ್ವಾಮಿ ಪೂಜಾರ ನಡೆಸಿಕೊಟ್ಟರು. ತಬಲಾ ಸೇವೆಯನ್ನು ಚನ್ನಪ್ಪ ಗಿಡ್ಡಕೆಂಚಣ್ಣವರ, ಸಂಗೀತ ಸೇವೆಯನ್ನು ಅಶೋಕ ಗಿಡ್ಡಕೆಂಚಣ್ಣವರ, ನೀಮಗಪ್ಪಾಚಾರ್ಯ ಬಡಿಗೇರ ಹಾಗೂ ಪರಶುರಾಮ ಹುಗಾರ ಸಲ್ಲಿಸಿದರು. ದೇವಿಯ ಸದ್ಭಕ್ತರು ಉಪಸ್ಥಿತರಿದ್ದರು.

## ದಸರಾ ಸಂಭ್ರಮದಲ್ಲಿ ಇಂದು ಕವಿಗೋಷ್ಠಿ

**ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಾಡಹಬ್ಬ ದಸರಾ ಅಂಗವಾಗಿ ಅ. 17ರಂದು ಸಂಜೆ 6.30ಕ್ಕೆ ನಗರದ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನದಲ್ಲಿ ಕವಿಗೋಷ್ಠಿ ಆಯೋಜಿಸಲಾಗಿದೆ. ವೈದ್ಯ ಸಾಹಿತಿ ಡಾ. ಕಲ್ಲೇಶ ಮೂರಶಿಳ್ಳಿನ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಾಹಿತಿ ಭಾರತಿ ಮೋಹನ ಕೋಟಿ ಆಶಯ ನುಡಿಗಳನ್ನಾಡುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು. ಕವಿಗೋಷ್ಠಿಯಲ್ಲಿ ಶಕುಂತಲಾ ಸಿಂಧೂರ, ಮಂಜುಳಾ ವೆಂಕಟೇಶಯ್ಯ, ಅನಸೂಯಾ ಮಿಟ್ಟಿ, ಮಮತಾ ದೊಡ್ಡಮನಿ, ನೀಲಮ್ಮ ಅಂಗಡಿ, ಶಕುಂತಲಾ ಗಿಡ್ನಂದಿ, ಅಕ್ಕಮಹಾದೇವಿ ಹಾರೋಗೇರಿ, ಕಾವ್ಯ ಅಂಗಡಿ, ಮೇಘಾ ಮುದ್ದಿ, ಬಸವರಾಜ ವಾರಿ, ಜಯಶ್ರೀ ಅಂಗಡಿ, ಶಿಲ್ಪಾ ಮ್ಯಾಗೇರಿ, ಚಂದ್ರಕಲಾ ಇಟಗಿಮಠ, ಮಂಜುನಾಥ ಡೋಣಿ, ಬಸವರಾಜ ನೆಲಜೇರಿ, ಭಾಗ್ಯಶ್ರೀ ಹುರಕಡ್ಲಿ, ರೇಣುಕಾ ಪೂಜಾರ, ಸೌಮ್ಯ ಹಿರೇಮಠ, ಬೂದೇಶ ಮಜ್ಜಿಗುಡ್ಡ, ಮಹೇಶ ಕರಿ, ಶಾಂತಾ ಅಂಗಡಿ, ಜೆ.ಎ. ಪಾಟೀಲ ಹಾಗೂ ಆರ್.ಬಿ. ಕೊಣ್ಣೂರ ಸೇರಿದಂತೆ ಹಲವು ಕವಿಗಳು ಕವನ ವಾಚಿಸಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka
Printed at : Sai Printing Press, Near Joda Maruti Temple, Gadag-582101, Dist : Gadag- Karnataka